# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜುಲೈ 8, 2021

ಸಂಪುಟ : 48 ಸಂಚಿಕೆ : 55 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ಮೋದಿ ಸಂಪುಟಕ್ಕೆ ಸರ್ಜರಿ

## ಆರೋಗ್ಯ, ಐ.ಟಿ., ಮಾಹಿತಿ ಸಚಿವರೂ ಸೇರಿದಂತೆ 12 ಸಚಿವರ ರಾಜೀನಾಮೆ

ನವದೆಹಲಿ, ಜು. 7 – ತಮ್ಮ ಎರಡನೇ ಅವಧಿಯ ಸರ್ಕಾರದ ಮಂತ್ರಿಮಂಡಲದಲ್ಲಿ ದೊಡ್ಡ ಪ್ರಮಾಣದ ಬದಲಾವಣೆ ಮಾಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಪ್ರಮುಖ ಖಾತೆಗಳನ್ನು ಹೊಂದಿದ್ದ 12 ಸಚಿವರನ್ನು ಕೈ ಬಿಟ್ಟಿದ್ದಾರೆ. 36 ಹೊಸ ಸಚಿವರನ್ನು ಸೇರ್ಪಡೆ ಮಾಡಿಕೊಳ್ಳುವ ಜೊತೆಗೆ, ಏಳು ಹಾಲಿ ಸಚಿವರಿಗೆ ಸಂಪುಟ ದರ್ಜೆಗೆ ಬಡ್ತಿ ನೀಡಿದ್ದಾರೆ.

ಆರೋಗ್ಯ ಸಚಿವ ಹರ್ಷ ವರ್ಧನ್, ಐ.ಟಿ. ಸಚಿವ ರವಿ ಶಂಕರ ಪ್ರಸಾದ್ ಹಾಗೂ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ಸಂಪುಟದಿಂದ ಹೊರ ಬಿದ್ದವರಲ್ಲಿ ಸೇರಿದ್ದಾರೆ.

ಹದಿನೈದು ಸಂಪುಟ ದರ್ಜೆ ಸಚಿವರು ಹಾಗೂ 28 ರಾಜ್ಯ ಖಾತೆ ಸಚಿವರು ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಬಹುತೇಕರು ಹಿಂದಿಯಲ್ಲಿ ಹಾಗೂ ಕೆಲವರು ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

2019ರಲ್ಲಿ ಮೋದಿ ಸರ್ಕಾರ ಎರಡನೇ ಅವಧಿಗೆ ಅಧಿಕಾರಕ್ಕೆ ಬಂದ ನಂತರ ಇದು ಮೊದಲ ಮಂತ್ರಿ ಮಂಡಲ ಪುನರ್‌ರಚನೆಯಾಗಿದೆ.

**ಒಟ್ಟು 43 ಸಚಿವರಿಂದ ರಾಷ್ಟ್ರಪತಿ ಭವನದಲ್ಲಿ ಪ್ರಮಾಣ ವಚನ**

**36 ಹೊಸ ಸಚಿವರು ಮೋದಿ ಮಂತ್ರಿಮಂಡಲಕ್ಕೆ ಸೇರ್ಪಡೆ**

**ಏಳು ಹಾಲಿ ಸಚಿವರಿಗೆ ಸಂಪುಟ ದರ್ಜೆಗೆ ಬಡ್ತಿ**

**ನೂತನ ಮಂತ್ರಿಮಂಡಲದ ಸಚಿವರ ಸಂಖ್ಯೆ 77ಕ್ಕೆ ಏರಿಕೆ**

**ನೂತನ 43 ಸಚಿವರಲ್ಲಿ 15 ಸಂಪುಟ ದರ್ಜೆ ಹಾಗೂ ಉಳಿದ 28 ರಾಜ್ಯ ಖಾತೆ ಸಚಿವರು**

**16 ನೂತನ ಸಚಿವರು ಮೊದಲ ಬಾರಿಗೆ ಸಂಸದರಾದವರು**

**ಸಂಪುಟಕ್ಕೆ ಸೇರ್ಪಡೆಯಾದವರಲ್ಲಿ ಏಳು ಮಹಿಳೆಯರು**

ಮೋದಿ ಹಾಗೂ ಬಿಜೆಪಿಯ ಉನ್ನತ ಮುಖಂಡರು ಸಚಿವರ ಜೊತೆ ಸರಣಿ ಸಭೆ ನಡೆಸಿ ಸುದೀರ್ಘ ಸಮಾಲೋಚನೆ ನಡೆಸಿದ ನಂತರ ಈ ಬದಲಾವಣೆ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಕೊರೊನಾ ಬಿಕ್ಕಟ್ಟು ನಿರ್ವಹಣೆಯಲ್ಲಿ ಸರ್ಕಾರ ಕಟು ಟೀಕೆಗೆ ಗುರಿಯಾದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಮಹಾರಾಷ್ಟ್ರದ ರಾಜ್ಯಸಭಾ ಸದಸ್ಯ ನಾರಾಯಣ ರಾಣೆ ಅವರು ಮೊದಲು ಪ್ರಮಾಣ ವಚನ ಸ್ವೀಕರಿಸಿದರು. ನಂತರ ಅಸ್ಸಾಂ ಮಾಜಿ ಮುಖ್ಯಮಂತ್ರಿ ಸರ್ಬಾನಂದ ಸೋನಾವಲ್ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಕಾಂಗ್ರೆಸ್‌ನಿಂದ ಬಿಜೆಪಿಗೆ ಜಿಗಿದಿದ್ದ ಮಧ್ಯ ಪ್ರದೇಶದ ಜ್ಯೋತಿರಾಧಿತ್ಯ ಸಿಂಧಿಯಾ ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ಚವನ ಸ್ವೀಕರಿಸಿದ್ದಾರೆ. ಮಧ್ಯ ಪ್ರದೇಶದ ವೀರೇಂದ್ರ ಕುಮಾರ್, ಒಡಿಶಾದ ಅಶ್ವಿನಿ ವೈಷ್ಣವ್, ಬಿಹಾರದ ಆರ್.ಸಿ.ಪಿ. ಸಿಂಗ್ (3ನೇ ಪುಟಕ್ಕೆ)

## ಕೇಂದ್ರ ಸಂಪುಟದಲ್ಲಿ ಪ್ರಮುಖ ಬದಲಾವಣೆ

ನವದೆಹಲಿ, ಜು. 7 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಖಾತೆಗಳಲ್ಲಿ ಪ್ರಮುಖ ಬದಲಾವಣೆ ಮಾಡಿದ್ದು, ಮನ್‌ಸುಖ್ ಮಾಂಡವೀಯ ಅವರು ನೂತನ ಆರೋಗ್ಯ ಸಚಿವರಾಗಿದ್ದಾರೆ ಹಾಗೂ ಅಶ್ವಿನಿ ವೈಷ್ಣವ್ ಅವರು ನೂತನ ರೈಲ್ವೆ ಸಚಿವರಾಗಿದ್ದಾರೆ.

**ಮಾಂಡವೀಯಗೆ ಆರೋಗ್ಯ, ವೈಷ್ಣವ್‌ಗೆ ರೈಲ್ವೆ ಸಿಂಧಿಯಾಗೆ ವಿಮಾನಯಾನ, ಪ್ರಧಾನ್‌ಗೆ ಶಿಕ್ಷಣ ಖಾತೆ**

ಮಾಂಡವೀಯ ಅವರಿಗೆ ರಸಾಯನಿಕ ಹಾಗೂ ರಸಗೊಬ್ಬರ ಖಾತೆಯನ್ನೂ ನೀಡಲಾಗಿದೆ. ವೈಷ್ಣವ್ ಅವರು ಸಂಪರ್ಕ, ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ಸಚಿವರಾಗಿದ್ದಾರೆ ಎಂದು ರಾಷ್ಟ್ರಪತಿ ಭವನದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ನಾಗರಿಕ ವಿಮಾನಯಾನ ಖಾತೆ ನೀಡಲಾಗಿದ್ದರೆ, ಗೃಹ ಸಚಿವ ಅಮಿತ್ ಷಾ ಅವರು ನೂತನವಾಗಿ ರಚಿಸಲಾಗಿರುವ (3ನೇ ಪುಟಕ್ಕೆ)

## ಬಾಲಿವುಡ್ ದಿಗ್ಗಜ ನಟ ದಿಲೀಪ್ ಕುಮಾರ್ ಇನ್ನಿಲ್ಲ



ಮುಂಬೈ, ಜು. 7- ಏಳು ದಶಕಗಳ ಕಾಲ ಬೆಳ್ಳಿ ತೆರೆಯಲ್ಲಿ ಕಂಗೊಳಿಸಿದ್ದ ಬಾಲಿವುಡ್‌ನ ದಿಗ್ಗಜ ನಟ ದಿಲೀಪ್ ಕುಮಾರ್ ಅವರು ಬುಧವಾರ ಮುಂಬೈ ಆಸ್ಪತ್ರೆಯಲ್ಲಿ ಸುದೀರ್ಘ ಕಾಲದ ಅಸ್ವಸ್ಥತೆಯಿಂದ ನಿಧನರಾಗಿದ್ದಾರೆ. ಅವರಿಗೆ 98 ವರ್ಷ ವಯಸ್ಸಾಗಿತ್ತು.

ದುರಂತ ಪಾತ್ರಗಳನ್ನು (3ನೇ ಪುಟಕ್ಕೆ)

## ರಾಜ್ಯದ ನಾಲ್ವರು ಕೇಂದ್ರ ಸಂಪುಟಕ್ಕೆ


ಶೋಭಾ ಕರಂದ್ಲಾಜೆ


ನಾರಾಯಣಸ್ವಾಮಿ


ರಾಜೀವ್ ಚಂದ್ರಶೇಖರ್


ಭಗವಂತ ಖೂಬಾ

ಬೆಂಗಳೂರು, ಜು. 7 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಲಯದಲ್ಲಿ ಗುರುತಿಸಿಕೊಳ್ಳುವ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ ಪ್ರತಿನಿಧಿಸುವ ಶೋಭಾ ಕರಂದ್ಲಾಜೆ ಸೇರಿದಂತೆ ರಾಜ್ಯದ ನಾಲ್ವರು ಪ್ರಧಾನಿ ನರೇಂದ್ರ ಮೋದಿ ಸಂಪುಟ ಸೇರ್ಪಡೆಯಾಗಿದ್ದಾರೆ.

ಯಡಿಯೂರಪ್ಪ ಪುತ್ರ ಶಿವಮೊಗ್ಗ ಕ್ಷೇತ್ರ ಪ್ರತಿನಿಧಿಸುತ್ತಿರುವ ಬಿ.ವೈ. ರಾಘವೇಂದ್ರ ಅವರು ಮೋದಿ ಸಂಪುಟ ಸೇರಲು ಕುಟುಂಬದವರಿಂದಲೇ ವಿರೋಧ ವ್ಯಕ್ತಗೊಂಡ ಹಿನ್ನೆಲೆಯಲ್ಲಿ ಶೋಭಾ ಅವರಿಗೆ ಸಚಿವ ಸ್ಥಾನ ದೊರೆತಿದೆ.

ಶೋಭಾ ಅವರು ಒಕ್ಕಲಿಗ ಸಮುದಾಯವನ್ನು (3ನೇ ಪುಟಕ್ಕೆ)

## ಕೋವಿಡ್ ನಿರ್ವಹಣೆಯಲ್ಲಿ ಬಿಜೆಪಿ ವಿಫಲ

### ಜಿಲ್ಲಾ ಕಾಂಗ್ರೆಸ್ ನ ಸೈಕಲ್ ಜಾಥಾದಲ್ಲಿ ಮಾಜಿ ಕೇಂದ್ರ ಸಚಿವ ಮುನಿಯಪ್ಪ



ದಾವಣಗೆರೆ, ಜು.7- ಕೊವೀಡ್ ನಿರ್ವಹಣೆಯನ್ನು ನಿಭಾಯಿಸುವುದು ಸೇರಿದಂತೆ ದೇಶದಲ್ಲಿ ಬಿಜೆಪಿ ಸರ್ಕಾರ ಎಲ್ಲಾ ವಿಷಯಗಳಲ್ಲೂ ವಿಫಲವಾಗಿದೆ ಎಂದು ಮಾಜಿ ಕೇಂದ್ರ ಸಚಿವ ಕೆ.ಹೆಚ್. ಮುನಿಯಪ್ಪ ಕಿಡಿಕಾರಿದರು.

ಇಂಧನ, ಅಗತ್ಯ ವಸ್ತುಗಳ ಬೆಲೆಗಳನ್ನು ಏರಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ನಿಂದ ಸ್ಥಳೀಯ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಬಳಿ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ನೇತೃತ್ವದಲ್ಲಿ ಇಂದು ಹಮ್ಮಿಕೊಂಡಿದ್ದ ಬೈಸಿಸೈಕಲ್ ಜಾಥಾಕ್ಕೆ ಸೈಕಲ್ ಚಲಾಯಿಸುವ ಮುಖೇನ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರವು ಪ್ರತಿ ದಿನ (3ನೇ ಪುಟಕ್ಕೆ)

### ಸರ್ಕಾರ ಸಣ್ಣತನ ಬಿಟ್ಟು ಲಸಿಕೆ ನೀಡಲಿ



ದೇಶಾದ್ಯಂತ ಕೊರೊನಾದಿಂದ ಜನ ತತ್ತರಿಸಿ ಹೋಗಿದ್ದಾರೆ. ಆದರೆ, ಬಿಜೆಪಿ ಸರ್ಕಾರಕ್ಕೆ ಜನರಿಗೆ ಸಮರ್ಪಕವಾಗಿ ಲಸಿಕೆ ಕೊಡುವುದಕ್ಕೆ ಆಗುತ್ತಿಲ್ಲ. ಸರ್ಕಾರದ ಲಸಿಕೆ ಸಿಗದಿದ್ದರೆ ಜನರು ಬದುಕುವುದಾದರೂ ಹೇಗೆ. 18 ವರ್ಷ ಮೇಲ್ಪಟ್ಟವರಿಗೂ ಲಸಿಕೆ ಸಿಗುತ್ತಿಲ್ಲ. ನಾವು ನಮ್ಮ ಕುಟುಂಬದಿಂದ ವಾರ್ಡ್ ವ್ಯಾಪ್ತಿಯಲ್ಲಿ ಜನರಿಗೆ (3ನೇ ಪುಟಕ್ಕೆ)

## ಚಿಕನ್, ಮಟನ್ ತ್ಯಾಜ್ಯ ವಿಲೇವಾರಿಗೆ ಟೆಂಡರ್

ದಾವಣಗೆರೆ, ಜು. 7 - ನಗರದಲ್ಲಿರುವ ಚಿಕನ್ ಹಾಗೂ ಮಟನ್ ಅಂಗಡಿಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ವಿಲೇವಾರಿಗೆ ಶೀಘ್ರದಲ್ಲೇ ಟೆಂಡರ್ ಕರೆಯ ಲಾಗುವುದು ಎಂದು ಪಾಲಿಕೆ ಮಹಾಪೌರರಾದ ಎಸ್.ಟಿ. ವೀರೇಶ್ ತಿಳಿಸಿದ್ದಾರೆ. ಬಕ್ರೀದ್ ಹಬ್ಬದ ಪ್ರಯುಕ್ತ (3ನೇ ಪುಟಕ್ಕೆ)

**ಬಕ್ರೀಡ್ ಹಬ್ಬದ ಸೌಹಾರ್ದ ಸಭೆಯಲ್ಲಿ ಸಮಸ್ಯೆಗಳ ಅನಾವರಣ**

## ಹೊಸ ಪೀಳಿಗೆ, ಸಾಮಾಜಿಕ ಪ್ರಾತಿನಿಧ್ಯದ ಮೋದಿ ಸಂಪುಟ

ನವದೆಹಲಿ, ಜು. 7 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೂತನ ಸಂಪುಟ ಹೊಸ ಪೀಳಿಗೆಯನ್ನು ಒಳಗೊಂಡಿದೆ. ಹಿಂದುಳಿದ ಜಾತಿ, ದಲಿತರು, ಬುಡಕಟ್ಟು ಹಾಗೂ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಜೊತೆಗೆ ಹೆಚ್ಚು ರಾಜ್ಯಗಳ ಸದಸ್ಯರಿದ್ದಾರೆ. ಸಂಪುಟ ಪುನರ್‌ರಚನೆಯಲ್ಲಿ ಹೊಸ ಪೀಳಿಗೆಗೆ ಮಣೆ ಹಾಕಲಾಗಿದೆ. (2ನೇ ಪುಟಕ್ಕೆ)

**ವಾಜಪೇಯಿ ಸಂಪುಟದಲ್ಲಿದ್ದ ಏಕೈಕ ಹಾಲಿ ಸಚಿವ ರಾಜನಾಥ್ ಸಿಂಗ್**

## ಸೋಂಕಿನಿಂದ ಮೃತಪಟ್ಟ ಕುಟುಂಬಗಳಿಗೆ ಎಸ್ಸೆಸ್ಸೆಂ ವೈಯಕ್ತಿಕ ನೆರವು

ದಾವಣಗೆರೆ, ಜು.7- ಕೇಂದ್ರ ಸಚಿವ ಕೆ.ಹೆಚ್. ಮುನಿಯಪ್ಪ ಹಾಗೂ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಕೋವಿಡ್ ಸೋಂಕಿನಿಂದ ಮೃತಪಟ್ಟವರ ಕುಟುಂಬಗಳ ಮನೆಗಳಿಗೆ ಇಂದು ಭೇಟಿ ನೀಡಿ ಸಾಂತ್ವನ ಹೇಳಿದರು.

ಈ ವೇಳೆ ಶಾಮನೂರು ಮಲ್ಲಿಕಾರ್ಜುನ್ ಅವರು ವೈಯಕ್ತಿಕವಾಗಿ ಮೃತರ ಕುಟುಂಬಗಳಿಗೆ ತಲಾ 10 ಸಾವಿರ ರೂ.ಗಳ ನೆರವು ನೀಡಿದರು.




## ಜು.20 ರ ನಂತರ ನಾಲೆಗಳಿಗೆ ನೀರು ಸಾಧ್ಯತೆ : ಪವಿತ್ರ

ಮಲೇಬೆನ್ನೂರು, ಜು.7- ಭದ್ರಾ ಅಚ್ಚುಕಟ್ಟಿನ ಮುಂಗಾರು ಹಂಗಾಮು ಬೆಳೆಗಳಿಗೆ ಜಲಾಶಯದಿಂದ ನೀರು ಹರಿಸುವ ಬಗ್ಗೆ ಚರ್ಚಿಸಿ, ನಿರ್ಧಾರ ಕೈಗೊಳ್ಳುವ ಕುರಿತು ಇದೇ ದಿನಾಂಕ 15 ರಂದು ಭದ್ರಾ ಕಾಡಾ ಸಭೆ ಕರೆಯಲಾಗಿದೆ ಎಂದು ಭದ್ರಾ ಕಾಡಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ (2ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 155 ಅಡಿ 6 ಇಂಚು
ಒಳ ಹರಿವು: 1759 ಕ್ಯೂಸೆಕ್ಸ್
ಹೊರ ಹರಿವು : 81 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 142.11 ಅಡಿ



## ಕೆ. ಶಂಭುಲಿಂಗಪ್ಪ ನಿಧನ

ದಾವಣಗೆರೆ ತರಳಬಾಳು ಬಡಾವಣೆ,
ವಿದ್ಯಾನಗರ ವಾಸಿ
**ಶ್ರೀ ಕೆ. ಶಂಭುಲಿಂಗಪ್ಪ** ಅವರು
ದಿನಾಂಕ 7.7.2021ರ ಬುಧವಾರ ಸಂಜೆ 4 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 92 ವರ್ಷ ವಯಸ್ಸಾಗಿತ್ತು.
ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.7.2021ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮ ದಾವಣಗೆರೆ ತಾಲ್ಲೂಕಿನ ಶಿರಗನಹಳ್ಳಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
**ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು.** ಮೊ. 94491-75198

## ಶತಾಯುಷಿ

## ಶ್ರೀಮತಿ ರಾಜಮತಿ ಅಮ್ಮ ಜಿನೈಕ್ಯ



ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 5ನೇ ಕ್ರಾಸ್ ವಾಸಿ
ದಿಗಂಬರ ಜೈನ ಸಮಾಜದ ಶ್ರೀ ಮಹಾವೀರ ಸಂಘದ ಗೌರವಾಧ್ಯಕ್ಷರಾದ
ಶ್ರೀ ಸುದರ್ಶನ್‌ಕುಮಾರ್ ಮತ್ತು ಸಹೋದರರ ತಾಯಿಯವರಾದ
**ಶತಾಯುಷಿ ಶ್ರೀಮತಿ ರಾಜಮತಿ ಅಮ್ಮ**
ಅವರು ದಿನಾಂಕ 07.07.2021ರ ಬುಧವಾರ ಸಂಜೆ 6.15 ಕ್ಕೆ ಜಿನೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪುತ್ರರು, ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಜಿನೈಕ್ಯರ ಅಂತ್ಯಕ್ರಿಯೆಯನ್ನು ದಿನಾಂಕ 08.07.2021ರ ಗುರುವಾರ ಬೆಳಿಗ್ಗೆ 10.30 ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : **ನಯನ ಫ್ಯಾಮಿಲಿ**

| ನಯನ ಏಜೆನ್ಸೀಸ್ | ನಯನ ಫರ್ನೀಚರ್ಸ್ | ನ್ಯೂ ನಯನ ಫರ್ನೀಚರ್ಸ್ | ನಯನ ಇಂಡಸ್ಟ್ರೀಸ್ |
|---|---|---|---|
| ಚಾಮರಾಜಪೇಟೆ, ದಾವಣಗೆರೆ. | ಮಂಡಿಪೇಟೆ, ದಾವಣಗೆರೆ. | ಮಂಡಿಪೇಟೆ, ದಾವಣಗೆರೆ. | ಬೇತೂರು ರಸ್ತೆ, ದಾವಣಗೆರೆ. |

ಮೊಬೈಲ್ : 94810 38402, 99017 16310

# ನಿವೇಶನಕ್ಕೆ ಹಣ ಸಂಗ್ರಹಿಸಲು ಅನುಮತಿ ಪಡೆದಿದ್ದಾರೆಯೇ ?



### ಶಾಸಕ ಎಸ್. ರಾಮಪ್ಪ ವಿರುದ್ಧ ಮಾಜಿ ಶಾಸಕ ಬಿ.ಪಿ. ಹರೀಶ್ ವಾಗ್ದಾಳಿ

ಹರಿಹರ, ಜು.7- ಜಿಲ್ಲೆಗೆ ಬರಲಿರುವ ವೈದ್ಯಕೀಯ ಕಾಲೇಜನ್ನು ಹರಿಹರದಲ್ಲಿ ಪ್ರಾರಂಭಿಸಲು ಅನೇಕ ಸಂಘಟನೆಯವರಿಂದ ಮತ್ತು ಮಾಧ್ಯಮ ಮಿತ್ರರಿಂದ ಕೂಗು ಎದ್ದಿದೆ. ಈ ಸಂಬಂಧ ಸರ್ಕಾರದ ಗಮನ ಸೆಳೆಯುವ ದೃಷ್ಟಿಯಿಂದ ಸಹಿ ಸಂಗ್ರಹ ಅಭಿಯಾನ ಮಾಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಮಾಜಿ ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಗಾಂಧಿ ವೃತ್ತದಲ್ಲಿ ನಗರದಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭಿಸುವಂತೆ ಸರ್ಕಾರದ ಗಮನ ಸೆಳೆಯಲು ಸಹಿ ಸಂಗ್ರಹ ಅಭಿಯಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಂತರ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಆರೋಗ್ಯ ಸಚಿವ ಸುಧಾಕರ್ ಅವರಿಗೆ ಒತ್ತಡ ಹಾಕುವ ಕೆಲಸವನ್ನು ಮಾಡುತ್ತೇನೆ. ಸರ್ವ ಪಕ್ಷದ ನಾಯಕರೊಂದಿಗೆ ಮುಖ್ಯಮಂತ್ರಿಗಳ ಬಳಿ ನಿಯೋಗ ಕರೆದೊಯ್ದು ಮನವಿ ಸಲ್ಲಿಸುವುದಾಗಿ ಹರೀಶ್ ತಿಳಿಸಿದರು.

ಶಾಸಕ ರಾಮಪ್ಪನವರು ನನ್ನ ಮೇಲೆ ಮಾನನಷ್ಟ ಮೊಕದ್ದಮೆ ಹೂಡಲಿ, ನಾನು ಅದಕ್ಕೆ ಬೆದರುವ ವ್ಯಕ್ತಿಯಲ್ಲ. ಈಗಾಗಲೇ ಅವರು ಸಾರ್ವಜನಿಕರಿಂದ ಹಣ ಪಡೆದು ನಿವೇಶನ ನೀಡುವುದಕ್ಕೆ ಸಿದ್ಧ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ, ಅವರು ಎಷ್ಟು ಜನರಿಂದ ಹಣವನ್ನು ಪಡೆದಿದ್ದಾರೆ, ಯಾವ ಸಮಯದಲ್ಲಿ ಪಡೆದಿದ್ದಾರೆ, 11 ಎಕರೆ ಪ್ರದೇಶದಲ್ಲಿ ಎಲ್ಲರಿಗೂ ವಿತರಣೆ ಮಾಡುವುದಕ್ಕೆ ಆಗುತ್ತದೆಯೇ? ರಾಜ್ಯಪಾಲರಿಗೆ ಕಳಿಸಿದ್ದೇವೆ ಎಂದು ಹೇಳುತ್ತಾರೆ. ಹಣ ಸಂಗ್ರಹಿಸಲು ಸರ್ಕಾರದಿಂದ ಅನುಮತಿ ಸಿಕ್ಕಿದೆಯೇ? ಈ ಬಗ್ಗೆ ಮೊದಲು ಬಹಿರಂಗ ಪಡಿಸಲಿ. ನಂತರದಲ್ಲಿ ನನ್ನ ಮೇಲೆ ಮಾನನಷ್ಟ ಮೊಕದ್ದಮೆ ಹೂಡಲಿ ಎಂದು ಸವಾಲೆಸೆದರು.

ನನಗೆ ಮಾಹಿತಿ ಬಂದಿರುವ ಪ್ರಕಾರ ಕನಿಷ್ಠ 800 ರಿಂದ 900 ಜನರಿಂದ ಹಣವನ್ನು ಪಡೆದಿದ್ದಾರೆ ಎನ್ನಲಾಗಿದೆ. ಅಷ್ಟೊಂದು ಜನರಿಗೆ 11 ಎಕರೆ ಪ್ರದೇಶದಲ್ಲಿ ನಿವೇಶನ ನೀಡಲು ಸಾಧ್ಯವಾಗುತ್ತದೆಯೇ. ಒಂದು ವೇಳೆ ಅದು ಸಾಧ್ಯವಾದರೆ, ಆ ಪ್ರದೇಶ ಸ್ಲಂ ಆಗುತ್ತದೆ ಬಡಾವಣೆ ಆಗುವುದಿಲ್ಲ ಎಂದು ಹೇಳಿದರು.

ರಾಮಪ್ಪನವರೇ ಬಿಜೆಪಿ ಹೈಕಮಾಂಡ್ ಆಗುವಂತೆ ಕಾಣುತ್ತದೆ. ಕಾರಣ ಕಾಂಗ್ರೆಸ್ ಪಕ್ಷದಲ್ಲಿ ಅವರಿಗೆ ಈ ಬಾರಿ ಟಿಕೆಟ್ ಕೈ ತಪ್ಪಬಹುದು ಎಂಬ ವಿಶ್ವಾಸ ಮೂಡಿರಬಹುದು. ಅದಕ್ಕೆ ಬಿಜೆಪಿ ಪಕ್ಷ ಏನು ಮಾಡುತ್ತದೆ ಎಂದು ನೋಡುತ್ತಿದ್ದಾರೆ. ಎಲ್ಲಾ ಪಕ್ಷದಲ್ಲಿ ಚುನಾವಣಾ ಸಮಯದಲ್ಲಿ ಆಕಾಂಕ್ಷಿತರು ಹುಟ್ಟಿಕೊಳ್ಳುವುದು ಸಹಜ. ಕಾಂಗ್ರೆಸ್ ಪಕ್ಷದಲ್ಲಿ ಸಹ ವಕೀಲ ಎಂ. ನಾಗೇಂದ್ರಪ್ಪ, ಡಾ. ಶೈಲೇಶ್ ಕುಮಾರ್ ಮತ್ತು ಈಗ ಚಾಲ್ತಿಗೆ ಬಂದಿರುವ ಎನ್. ಹೆಚ್. ನಂದಿಗಾವಿ ಶ್ರೀನಿವಾಸ್ ಕೂಡ ಹೆಚ್ಚು ಕಾಂಗ್ರೆಸ್ ಸಭೆ, ಸಮಾರಂಭಗಳಲ್ಲಿ ಕಾಣಿಸುವುದರಿಂದ ಅವರು ಕೂಡ ಆಕಾಂಕ್ಷಿ ಇರಬಹುದು. ರಾಮಪ್ಪನವರು ನನಗೆ ಟಿಕೆಟ್ ಕೈ ತಪ್ಪುತ್ತದೆ ಎಂದು ಹತಾಶರಾಗಿ ಮಾತನಾಡುತ್ತಿದ್ದಾರೆ ಎಂದು ಹೇಳಿದರು.

ನಾನು 120 ಕೋಟಿ ಅಭಿವೃದ್ಧಿ ಹಣವನ್ನು ತಡೆಗಟ್ಟಲು ಕಾರಣ ಎಂದು ಹೇಳುತ್ತಾರೆ. ಅದೆಲ್ಲ ಶುದ್ಧ ಸುಳ್ಳು. ದರ್ಗಾ ಮುಂಭಾಗದ ರಸ್ತೆ ವಿಚಾರದಲ್ಲಿ ನಾನು ಸರ್ವೆ ಮಾಡಿ, ನಂತರದಲ್ಲಿ ರಸ್ತೆ ಕಾಮಗಾರಿ ಮಾಡಿ ಎಂದು ಹೇಳಿದ್ದೇವೆ. ಕಾರಣ ಸರ್ವೆ ಮಾಡಿದ ನಂತರದಲ್ಲಿ ವರದಿ ಬಂದಿದ್ದರಲ್ಲಿ ದರ್ಗಾ ಸ್ಥಳವು ಒತ್ತುವರಿ ಆಗಿದೆ ಎಂದು ವರದಿ ಬಂದಿದೆ. ನಾವು ಆದಾಗ್ಯೂ ದರ್ಗಾ ಕಟ್ಟಡ ಕೆಡವುವಂತೆ ಹೇಳಿಲ್ಲ. ಆದರೆ ಜನರಿಗೆ ಸತ್ಯತೆ ಏನು ಎಂಬುದನ್ನು ತಿಳಿಸಿ ರಸ್ತೆ ಮಾಡಿ ಎಂದು ಹೇಳಿದ್ದೇವೆ. ಈಗಲೂ ಕಾಲ ಮಿಂಚಿಲ್ಲ. ಮಾಧ್ಯಮದವರು, ಅಧಿಕಾರಿಗಳು, ರಾಮಪ್ಪ, ನಾವು ಎಲ್ಲರೂ ಒಂದೆಡೆ ಕುಳಿತು ಸಮಸ್ಯೆ ಪರಿಹರಿಸಲು ಚರ್ಚಿಸಲು ಮುಂದಾಗಲಿ. ನನ್ನ ಕಡೆಯಿಂದ ಸಂಪೂರ್ಣ ಸಹಕಾರ ಇರುತ್ತದೆ ಎಂದು ಹೇಳಿದರು.

ಸಮಾಜ ಸೇವಕ ಎನ್.ಹೆಚ್. ನಂದಿಗಾವಿ ಶ್ರೀನಿವಾಸ್ ಮಾತನಾಡಿ, ತಾನು ಮತ್ತು ರಾಮಪ್ಪ ಕುಲಬಾಂಧವರು ಆಗುವುದರಿಂದ ಬಹಳ ಸಮಾರಂಭದಲ್ಲಿ ಇಬ್ಬರು ಜೊತೆಯಲ್ಲಿ ಪಾಲ್ಗೊಳ್ಳುವ ಅವಕಾಶ ಕೂಡಿರಬಹುದು. ಆದರೆ ನಾನು ಯಾವ ಪಕ್ಷದಿಂದ ಟಿಕೆಟ್ ಪಡೆದು ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂಬ ತೀರ್ಮಾನ ಕೈಗೊಂಡಿರುವುದಿಲ್ಲ. ಈಗ ನನ್ನ ದೃಷ್ಟಿಯಿರುವುದು ಸಮಾಜಕ್ಕೆ ಒಳ್ಳೆಯ ಕೊಡುಗೆಯನ್ನು ಕೊಡಬೇಕು ಎಂದು ಭಾವಿಸಿಕೊಂಡು ಸಮಾಜ ಸೇವೆಗೆ ಹೆಚ್ಚು ಆದ್ಯತೆ ನೀಡುತ್ತಿದ್ದೇನೆ. ಮುಂದೆ ಸಾರ್ವಜನಿಕರು ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಯೋ ಅದರಂತೆ ಹೆಜ್ಜೆಗಳನ್ನು ಹಾಕುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ನಗರಸಭೆ ಸದಸ್ಯ ಮಾರುತಿ ಶೆಟ್ಟಿ, ಮುಖಂಡರಾದ ಸುನೀಲ್, ಅದ್ವೈತ ಶಾಸ್ತ್ರಿ, ರವಿ ರಾಯ್ಕರ್, ರಾಘವೇಂದ್ರ, ಮಹಾಂತೇಶ್, ಸುಚೇತ್ ಪೂಜಾರ್ ಇನ್ನಿತರರಿದ್ದರು.

## ಹೊಸ ಪೀಳಿಗೆ, ಸಾಮಾಜಿಕ ಪ್ರಾತಿನಿಧ್ಯದ ಸಂಪುಟ

(1ನೇ ಪುಟದಿಂದ) ಹಿರಿಯರಾದ ಹರ್ಷವರ್ಧನ್, ಪ್ರಕಾಶ್ ಜಾವಡೇಕರ್, ಡಿ.ವಿ. ಸದಾನಂದ ಗೌಡ ಹಾಗೂ ರವಿ ಶಂಕರ್ ಪ್ರಸಾದ್ ಅವರನ್ನು ಕೈ ಬಿಟ್ಟು ಹೊಸಬರಿಗೆ ಅವಕಾಶ ನೀಡಲಾಗಿದೆ.

ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರದಲ್ಲಿ (1998-2004) ಕಾರ್ಯ ನಿರ್ವಹಿಸಿದ ರಾಜನಾಥ್ ಸಿಂಗ್ ಅವರು ಮಾತ್ರ ನೂತನ ಮೋದಿ ಸಂಪುಟದಲ್ಲಿ ಉಳಿದುಕೊಂಡಿದ್ದಾರೆ.

ಬಿಜೆಪಿ ತಳಹದಿ ವಿಸ್ತಾರವಾಗಿರುವುದನ್ನೂ ಸಂಪುಟ ಬಿಂಬಿಸುತ್ತಿದೆ. ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಗುಜರಾತ್ ಹಾಗೂ ಕರ್ನಾಟಕಗಳಂತಹ ರಾಜ್ಯಗಳ ಸದಸ್ಯರು ಹೆಚ್ಚಾಗಿದ್ದಾರೆ. ಮೋದಿ ಸರ್ಕಾರದಲ್ಲಿ ಈಗ 27 ಹಿಂದುಳಿದ ವರ್ಗ, 12 ದಲಿತ ಹಾಗೂ ಎಂಟು ಬುಡಕಟ್ಟು ಸಚಿವರಿದ್ದಾರೆ. 11 ಮಹಿಳಾ ಸದಸ್ಯರು ಮಂತ್ರಿ ಮಂಡಲದಲ್ಲಿದ್ದಾರೆ.

ಮೋದಿ ಸಂಪುಟ ಸೇರಿದ 36 ಹೊಸಬರಲ್ಲಿ ಎಂಟು ಜನರು ವಕೀಲರು, ನಾಲ್ವರು ವೈದ್ಯರು, ಇಬ್ಬರು ಮಾಜಿ ಐಎಎಸ್ ಅಧಿಕಾರಿಗಳು ಹಾಗೂ ನಾಲ್ವರು ಎಂಬಿಎ ಪದವೀಧರರಿದ್ದಾರೆ. ಹಲವರು ಇಂಜಿನಿಯರ್‌ಗಳೂ ಸಹ ಇದ್ದಾರೆ.

ರೈಲ್ವೆ ಖಾತೆ ಪಡೆದಿರುವ ಅಶ್ವಿನಿ ವೈಷ್ಣವ್ ಅವರು ಮಾಜಿ ಐಎಎಸ್ ಅಧಿಕಾರಿ. ಜನರಲ್ ಎಲೆಕ್ಟ್ರಿಕ್ ಹಾಗೂ ಸೀಮನ್ಸ್ ರೀತಿಯ ಕಂಪನಿಗಳಲ್ಲಿ ಅವರು ನಾಯಕತ್ವದ ಹುದ್ದೆ ನಿರ್ವಹಿಸಿದ್ದಾರೆ.

ಜ್ಯೋತಿರಾದಿತ್ಯ ಸಿಂಧಿಯಾ ಅವರು ಎಂಬಿಎ. ಪದವೀಧರ. ರಾಜೀವ್ ಚಂದ್ರಶೇಖರ್ ಎಂಟೆಕ್ ಪದವಿ ಹೊಂದಿದ್ದಾರೆ. ರಾಮಚಂದ್ರ ಪ್ರಸಾದ್ ಸಿಂಗ್ ಅವರು ಇನ್ನೋರ್ವ ಮಾಜಿ ಐಎಎಸ್ ಅಧಿಕಾರಿ. ಭಗವಂತ ಖೂಬಾ ಬಿಟೆಕ್ ಪದವೀಧರರು.

ಸುಭಾಷ್ ಸರ್ಕಾರ್, ಭಗವತ್ ಕೃಷ್ಣರಾವ್ ಕರಾಡ್, ಭಾರತಿ ಪ್ರವೀಣ್ ಹಾಗೂ ಮುಂಜಪರ ಮಹೇಂದ್ರಭಾಯಿ ಅವರು ವೈದ್ಯರಾಗಿದ್ದಾರೆ.

ಮೀನಾಕ್ಷಿ ಲೇಖಿ, ಸರ್ಬಾನಂದ ಸೋನಾವಲ್ ಸೇರಿದಂತೆ ಹಲವರು ವಕೀಲರಾಗಿದ್ದಾರೆ.

## ಹರಿಹರಕ್ಕೆ ವೈದ್ಯಕೀಯ ಕಾಲೇಜು ಮಲೇಬೆನ್ನೂರಿನಲ್ಲಿ ಸಹಿ ಸಂಗ್ರಹ



ಮಲೇಬೆನ್ನೂರು, ಜು.7- ಹರಿಹರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವಂತೆ ಒತ್ತಾಯಿಸಿ, ಮಲೇಬೆನ್ನೂರಿನಲ್ಲೂ ಇದೇ ದಿನಾಂಕ 11ರ ಭಾನುವಾರ ಬೆಳಿಗ್ಗೆ 10 ಕ್ಕೆ ಸಹಿ ಸಂಗ್ರಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್ ತಿಳಿಸಿದ್ದಾರೆ.

ಹರಿಹರ ನಗರದಲ್ಲಿ ಈಗಾಗಲೇ ನಡೆಯುತ್ತಿರುವ ಸಹಿ ಸಂಗ್ರಹ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಹಿ ಮಾಡಿದ ನಂತರ ಅವರು ಈ ವಿಷಯ ತಿಳಿಸಿದರು. ತಾಲ್ಲೂಕಿನ ಎಲ್ಲಾ ಹಳ್ಳಿಗಳಲ್ಲಿ ಸಂಚಾರಿ ವಾಹನದ ಮೂಲಕ ಸಹಿ ಸಂಗ್ರಹ ಮಾಡುವ ಉದ್ದೇಶ ಇದೆ ಎಂದು ನಂದಿಗಾವಿ ಶ್ರೀನಿವಾಸ್ ಹೇಳಿದರು. ಹರಿಹರ ತಾಲ್ಲೂಕು ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಪತ್ರಕರ್ತ ಜಿಗಳಿ ಪ್ರಕಾಶ್, ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಹಾಗು ಇನ್ನಿತರರು ಹಾಜರಿದ್ದರು.

## ನಗರ ಹಾಗೂ ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆರ್.ಎಂ.ಸಿ ಲಿಂಕ್ ರಸ್ತೆ, ಬಿ.ಟಿ. ಲೇಔಟ್, ಕೆ.ಆರ್. ರಸ್ತೆ, ಮಟ್ಟಿಕಲ್ ಇಮಾಮ್ ನಗರ, ಆನೆಕೊಂಡ, ಐನಳ್ಳಿ ಕಾಂಪೌಂಡ್, ಶೇಖರಪ್ಪ ನಗರ, ಹೆಚ್.ಕೆ.ಆರ್. ನಗರ, ಕಬ್ಬೂರು ಬಸಾಪುರ ನಗರ, ಅಣ್ಣಾ ನಗರ, ಎಪಿಎಂಸಿ, ಗೋಶಾಲೆ, ರವಿ ಮಿಲ್ಸ್, ಬಂಬೂ ಬಜಾರ್, ಬಸಾಪುರ ರಸ್ತೆ, ಭಾರತ್ ಕಾಲೋನಿ, ಪಿ.ಬಿ. ರಸ್ತೆ, ವರ್ಕ್ ಶಾಪ್ ಮತ್ತು ಗ್ರಾಮೀಣ ಭಾಗದ ಆವರಗೆರೆ, ಹೊನ್ನೂರು, ಐಗೂರು, ಬಾಡಾ ಕ್ರಾಸ್, ಮಲ್ಲಶೆಟ್ಟಿಹಳ್ಳಿ, ತೋಳಹುಣಸೆ, ದಾವಣಗೆರೆ ವಿಶ್ವವಿದ್ಯಾಲಯ, ಅತ್ತಿಗೆರೆ, ಕುರ್ಕಿ, ಬಾಡ, ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ, ಹನುಮನಹಳ್ಳಿ ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5.30 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

## ಬ್ಲ್ಯಾಕ್ ಫಂಗಸ್ ಕೂಡ್ಲಿಗಿಯಲ್ಲಿ ಓರ್ವನ ಸಾವು

ಕೂಡ್ಲಿಗಿ, ಜು.7- ತಾಲ್ಲೂಕಿನಲ್ಲಿ ಬ್ಲ್ಯಾಕ್ ಫಂಗಸ್ ರೋಗ ಲಕ್ಷಣದ ಮೊದಲ ಪ್ರಕರಣ ಪತ್ತೆಯಾಗಿದ್ದ ವ್ಯಕ್ತಿಯು ಬಳ್ಳಾರಿ ವಿಮ್ಸ್ ಆಸ್ಪತ್ರೆಯಲ್ಲಿ ಇಂದು ಬೆಳಿಗ್ಗೆ ಮೃತಪಟ್ಟಿದ್ದಾನೆ.

ತಾಲ್ಲೂಕಿನ ಬೆಳ್ಳಕಟ್ಟೆಯ ಮಹಾಲಿಂಗಪ್ಪ (60) ಮೃತ ವ್ಯಕ್ತಿ. ಈ ಹಿಂದೆ ಚಿತ್ರದುರ್ಗದ ಖಾಸಗಿ ಆಸ್ಪತ್ರೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಮಾಡಿಸಿದ್ದ ಮಹಾಲಿಂಗಪ್ಪ ಅವರಲ್ಲಿ ಬ್ಲ್ಯಾಕ್ ಫಂಗಸ್ ರೋಗ ಲಕ್ಷಣ ಕಂಡು ಬಂದಿದ್ದರಿಂದ ಕೂಡ್ಲಿಗಿ ತಾಲ್ಲೂಕು ಆಸ್ಪತ್ರೆಗೆ ದಾಖಲಾಗಿದ್ದರು.

ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ನೀಡಲಾಗುತ್ತಿತ್ತು.

ತೀವ್ರ ಉಸಿರಾಟದ ತೊಂದರೆಯಿಂದ ಮಹಾಲಿಂಗಪ್ಪ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

## ನಾರಾಯಣಸ್ವಾಮಿಗೆ ಕೇಂದ್ರ ಸಚಿವ ಸ್ಥಾನ



### ಹರಪನಹಳ್ಳಿಯಲ್ಲಿ ಅಭಿಮಾನಿಗಳ ಸಂಭ್ರಮಾಚರಣೆ

ಹರಪನಹಳ್ಳಿ, ಜು.7-ಸಂಸದ ಎ. ನಾರಾಯಣಸ್ವಾಮಿ ಅವರಿಗೆ ಕೇಂದ್ರ ಮಂತ್ರಿ ಮಂಡಲದಲ್ಲಿ ಸ್ಥಾನ ದೊರೆತಿದ್ದು, ಪಟ್ಟಣದಲ್ಲಿ ಬಿಜೆಪಿ ಮುಖಂಡ ಹಾಗೂ ಬೀಚಿ ಅಭಿಮಾನಿ ಬಳಗದ ಅಧ್ಯಕ್ಷ ಕಣವಿಹಳ್ಳಿ ಮಂಜುನಾಥ ಅವರ ನೇತೃತ್ವದಲ್ಲಿ ಇಂದು ಸಂಭ್ರಮಾಚರಣೆ ನಡೆಸಲಾಯಿತು.

ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಮಾತನಾಡಿದ ಕಣವಿಹಳ್ಳಿ ಮಂಜುನಾಥ ಅವರು, ನಾರಾಯಣ ಸ್ವಾಮಿ ಅವರಿಗೆ ಸಚಿವ ಸ್ಥಾನ ನೀಡುವುದರ ಮೂಲಕ ಮೋದಿಯವರು ದಲಿತ, ಎಡಗೈ ಸಮುದಾಯಕ್ಕೆ ಸಾಮಾಜಿಕ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ದೇಶದ ಹಿತ ದೃಷ್ಟಿಯಿಂದ ಸೂಕ್ತ ಸಮಯದಲ್ಲಿ ನಿರ್ಧಾರವನ್ನು ಪ್ರಧಾನಿ ಮೋದಿ ತೆಗೆದುಕೊಂಡಿದ್ದಾರೆ ಎಂದ ಅವರು, ರಾಜ್ಯದಲ್ಲಿ ಮಹಿಳೆಗೂ ಸೇರಿ ಇತರರಿಗೆ ಅವಕಾಶ ಮಾಡಿಕೊಟ್ಟಿರುವುದು ಸಂತಸ ತಂದಿದೆ ಎಂದರು.

ಪುರಸಭಾ ಸದಸ್ಯ ಹರಾಳು ಅಶೋಕ್ ಮಾತನಾಡಿ, ದಲಿತ ಮುಖಂಡನನ್ನು ಗುರುತಿಸಿ ಮಂತ್ರಿ ಮಾಡಿ ಪ್ರಧಾನಿ ಮೋದಿಯವರು ಉತ್ತಮ ಕಾರ್ಯ ಮಾಡಿದ್ದಾರೆ ಎಂದು ಹೇಳಿದರು.

ಮುಖಂಡರಾದ ವೈಕೆಬಿ ದುರುಗಪ್ಪ, ಸಿದ್ದಪ್ಪ ರೆಡ್ಡಿ, ಬೀಚಿ ಅಭಿಮಾನಿ ಬಳಗದ ಶೃಂಗಾರತೋಟದ ಲಿಂಗರಾಜ, ಕೊಂಗನಹೊಸೂರು ಜಗದೀಶ್, ಹಂಚಿನಮನೆ ಕೆಂಚಪ್ಪ, ಕಣವಿಹಳ್ಳಿ ಬಸವರಾಜ, ಸುರೇಶ್, ಎನ್. ಈಶ್ವರಪ್ಪ, ಮಂಜುನಾಥ ಪೂಜಾರ, ಉತ್ತಂಗಿ ಗೋಣೆಪ್ಪ ಇನ್ನಿತರರಿದ್ದರು.

## ರೈತರಿಗೆ ಇನ್ನು ಮುಂದೆ 16 ತಾಸು ವಿದ್ಯುತ್



### ರಾಣೇಬೆನ್ನೂರಿನ ಶಾಸಕ ಅರುಣಕುಮಾರ ಪೂಜಾರ

ರಾಣೇಬೆನ್ನೂರು, ಜು.7- ರೈತರಿಗೆ ಈಗ ನೀಡುತ್ತಿರುವ 7 ತಾಸು ವಿದ್ಯುತ್ ಬದಲು 15 ರಿಂದ 16 ತಾಸುಗಳವರೆಗೆ ವಿದ್ಯುತ್ ನೀಡುವ ಯೋಜನೆಯನ್ನು ಸರ್ಕಾರ ರೂಪಿಸುತ್ತಿದ್ದು, ಶೀಘ್ರದಲ್ಲೇ ಕಾರ್ಯಗತವಾಗಲಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ತಾಲ್ಲೂಕಿನ ಬೇಲೂರು ಗ್ರಾಮದಲ್ಲಿ 110 ಕೆವಿ ವಿದ್ಯುತ್ ಪ್ರಸರಣ ಘಟಕದ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಘಟಕದಿಂದ ಬೇಲೂರು, ಹೀಲದಹಳ್ಳಿ, ಅಂಕಸಾಪುರ, ಉದಗಟ್ಟಿ ಮುಂತಾದ ಗ್ರಾಮಗಳ ಜನತೆಗೆ ಇನ್ನು ಮುಂದೆ ವಿದ್ಯುತ್ ಸಮಸ್ಯೆ ಎದುರಾಗಲಾರದು. ಇದೇ ಘಟಕದಿಂದ ಎಕ್ಸ್‌ಪ್ರೆಸ್ ಲೈನ್ ಮೂಲಕ ಮೆಡ್ಲೇರಿ ಗ್ರಾಮದ ವಿದ್ಯುತ್ ಸಮಸ್ಯೆಯನ್ನು ಸಂಪೂರ್ಣ ನೀಗಿಸಲಾಗುವುದು ಎಂದರು.

ಗ್ರಾ.ಪಂ. ಅಧ್ಯಕ್ಷ ಕುಮಾರ ಚಟ್ಟಳ್ಳಿ, ನಗರ ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಮುಖಂಡರಾದ ಬಸವರಾಜ ಹುಲ್ಲತ್ತಿ, ಮಂಜುನಾಥ ಓಲೇಕಾರ, ಪಕ್ಕೀರಪ್ಪ ಹಾವನೂರ, ಹೆಸ್ಕಾಂ ಅಧಿಕಾರಿ ರಾಜು ಮರಿಗೌಡ್ರ, ವಿಜಯ ಜೋಷಿ, ನಂದಾ ಮರಡಿ ಇನ್ನಿತರರಿದ್ದರು.

## ಜು.20 ರ ನಂತರ ನಾಲೆಗಳಿಗೆ ನೀರು ಸಾಧ್ಯತೆ

(1ನೇ ಪುಟದಿಂದ) ರಾಮಯ್ಯ ತಿಳಿಸಿದ್ದಾರೆ.

'ಜನತಾವಾಣಿ'ಯೊಂದಿಗೆ ಮಾತನಾಡಿದ ಅವರು, ಇದೇ ದಿನಾಂಕ 15 ರ ಗುರುವಾರ ಮಧ್ಯಾಹ್ನ 3 ಗಂಟೆಗೆ ಶಿವಮೊಗ್ಗ ಸಮೀಪದ ಮಲವಗೊಪ್ಪ ದಲ್ಲಿರುವ ಭದ್ರಾ ಕಾಡಾ ಕಛೇರಿಯಲ್ಲಿ ನೀರಾವರಿ ಸಲಹಾ ಸಮಿತಿ ಸಭೆಯನ್ನು ನಿಗದಿ ಮಾಡಲಾಗಿದೆ ಎಂದು ಹೇಳಿದರು.

ಜಲಾಶಯದಲ್ಲಿ ನೀರಿನ ಸಂಗ್ರಹ ಉತ್ತಮವಾಗಿದ್ದು, ಅಚ್ಚುಕಟ್ಟು ಪ್ರದೇಶದ ರೈತರು ಈಗಾಗಲೇ ಸಸಿ ಮಡಿಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಜು. 9 ರ ನಂತರ ಮತ್ತೆ ಮಳೆ ಆರಂಭವಾಗುವ ನಿರೀಕ್ಷೆ ಇದೆ. ಅಲ್ಲದೆ, ಜಲಾಶಯದ ಇತಿಹಾಸ ಗಮನಿಸಿದರೆ ಜುಲೈ ತಿಂಗಳ ಕೊನೆಯಲ್ಲಿ ಮತ್ತು ಆಗಸ್ಟ್ ತಿಂಗಳಲ್ಲಿ ಮಳೆ ಆಗಿ ಜಲಾಶಯಕ್ಕೆ ಸಾಕಷ್ಟು ನೀರು ಹರಿದು ಬಂದಿದೆ. ಈ ಅಂಶವನ್ನು ಮನದಲ್ಲಿಟ್ಟುಕೊಂಡು ಜುಲೈ 20 ರ ನಂತರ ನಾಲೆಗಳಿಗೆ ನೀರು ಹರಿಸುವ ಬಗ್ಗೆ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಪವಿತ್ರ ರಾಮಯ್ಯ ಹೇಳಿದರು.

ಭದ್ರಾ ಜಲಾಶಯಕ್ಕೆ ಈ ವರ್ಷ ಜೂನ್ ತಿಂಗಳಲ್ಲೇ 16 ಅಡಿ ನೀರು ಏರಿಕೆ ಆಗಿದ್ದು, 16 ಟಿಎಂಸಿ ನೀರು ಹರಿದು ಬಂದಿದೆ. 1994 ರ ಜೂನ್‌ನಲ್ಲಿ 17.10 ಟಿಎಂಸಿ ಮತ್ತು 1971 ರ ಜೂನ್‌ನಲ್ಲಿ 22.31 ಟಿಎಂಸಿ ನೀರು ಹರಿದು ಬಂದಿರುವುದು ದಾಖಲಾಗಿದೆ.

ಸದ್ಯ ಜಲಾಶಯದಲ್ಲಿ 155 ಅಡಿ 6 ಇಂಚು ನೀರಿದ್ದು, ಒಳಹರಿವು 1759 ಕ್ಯೂಸೆಕ್ಸ್ ಇದೆ, 71.536 ಟಿಎಂಸಿ ಸಾಮರ್ಥ್ಯದ ಜಲಾಶಯದಲ್ಲಿ ಈಗ 38.869 ಟಿಎಂಸಿ ನೀರು ಸಂಗ್ರಹವಾಗಿದೆ.

ಕಳೆದ ವರ್ಷ ಈ ದಿನ ಜಲಾಶಯದಲ್ಲಿ 142 ಅಡಿ 11 ಇಂಚು ನೀರಿತ್ತು. 28,931 ಟಿಎಂಸಿ ನೀರು ಸಂಗ್ರಹವಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 10 ಟಿಎಂಸಿ ನೀರು ಹೆಚ್ಚಿದೆ.

**ರೈತರ ಒತ್ತಡ :** ಅಚ್ಚುಕಟ್ಟಿನ ಮೇಲ್ಭಾಗದ ರೈತರು ಜುಲೈ 15 ರಿಂದಲೇ ನಾಲೆಗಳಿಗೆ ನೀರು ಹರಿಸಬೇಕೆಂದು ಒತ್ತಡ ಹಾಕುತ್ತಿದ್ದು, ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ ಅವರು ಕೊನೆ ಭಾಗದ ರೈತರ ಅಭಿಪ್ರಾಯ ಸಂಗ್ರಹಿಸಿ, ಜುಲೈ 20 ರ ನಂತರ ನೀರು ಹರಿಸುವ ಚಿಂತನೆಯಲ್ಲಿದ್ದಾರೆ.

**ಸರ್ಕಾರದ ಪತ್ರ :** ಭದ್ರಾ ಜಲಾಶಯದಿಂದ ಅಪ್ಪರ್ ಭದ್ರಾ ಕಾಲುವೆಗೆ ಜುಲೈ 6 ರಿಂದ ನೀರು ಹರಿಸುವಂತೆ ಸರ್ಕಾರ ಆದೇಶಿಸಿದೆ ಎಂದು ಹೇಳಲಾಗಿದ್ದು, ಈ ಹಿನ್ನೆಲೆಯಲ್ಲಿ ಪವಿತ್ರ ರಾಮಯ್ಯ ಅವರು ಬುಧವಾರ ಸಾಯಂಕಾಲ ಭದ್ರಾ ಉನ್ನತ ಅಧಿಕಾರಿಗಳೊಂದಿಗೆ ಭದ್ರಾ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದಾರೆ.

ಜಲಾಶಯದಲ್ಲಿರುವ ನೀರಿನ ಸ್ಥಿತಿಗತಿ ಆಧರಿಸಿ ಮತ್ತು ಅಚ್ಚುಕಟ್ಟಿನ ಮುಂಗಾರು ಹಂಗಾಮಿನ ಬೆಳೆಗಳಿಗೆ ನೀರು ಹರಿಸಬೇಕಾಗಿರುವುದರಿಂದ ಸದ್ಯ ಅಪ್ಪರ್ ಭದ್ರಾಕ್ಕೆ ನೀರು ಹರಿಸುವುದು ಬೇಡ. ಮಳೆ ಚನ್ನಾಗಿ ಬಂದು ಡ್ಯಾಂ ತುಂಬಿದರೆ ನೀರು ಬಿಡೋಣ ಎಂಬ ಬಗ್ಗೆ ಚರ್ಚಿಸಿದ್ದಾರೆಂದು ತಿಳಿದುಬಂದಿದೆ.


**ಮನೆ ಭೋಗ್ಯಕ್ಕಿದೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ 'ಎ' ಬ್ಲಾಕ್‌ನಲ್ಲಿ ಕಟ್ಟಿರುವ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ಕಾರ್ ಪಾರ್ಕಿಂಗ್, ಲಿಫ್ಟ್ ಸೌಕರ್ಯ, ನೀರಿನ ಸೌಕರ್ಯವಿದ್ದು, ವಾಸ್ತು ಪ್ರಕಾರವಿರುವ ಮನೆ ಭೋಗ್ಯಕ್ಕಿದೆ. ಸಂಪರ್ಕಿಸಿ :
ಮೊ. 96322 67555

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ಪಕ್ಕದಲ್ಲಿ ಹಳೇ ಅಮರನಾಥ್‌ನಲ್ಲಿ ಪೂರ್ವ 30x38. ವಿನಾಯಕ ಬಡಾವಣೆ ಉತ್ತರ 30x70 ಹಾಗೂ 30x70 ಅಕ್ಕಪಕ್ಕ, ರಶ್ಮಿ ಹಾಸ್ಟೆಲ್ ಹತ್ತಿರ ಹೊಸ ಲೈಔಟ್‌ನಲ್ಲಿ 30x36, 30x40, 30x50
ಮಂಜುನಾಥ್ ಏಜೆಂಟ್
98444 91792

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ, ಅನ್ನ ದಾಸೋಹದ ದಾನಿಗಳು
ಡಾ.ಶಿವಯೋಗಿ ರಾಮನಗೌಡ
ಕುಸಗೂರ್, ದಾವಣಗೆರೆ
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಮನೆಗಳು ಬಾಡಿಗೆಗೆ / ಲೀಸ್ ಗೆ ಇವೆ**
ಎರಡು ಬೆಡ್ ರೂಂ, ಮೂರು ಬೆಡ್ ರೂಂ ಮನೆಗಳು ವಿದ್ಯಾನಗರ, ವಿನಾಯಕ ಬಡಾವಣೆ, ಶಿವಕುಮಾರಸ್ವಾಮಿ ಬಡಾವಣೆ.
(ಸಸ್ಯಹಾರಿಗಳಿಗೆ ಮಾತ್ರ)
ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ.
ಸ್ವಾಮಿ ಏಜೆಂಟ್, ವಿದ್ಯಾನಗರ.
ಮೊ. 97421-44715

**FOR RENT**
4 Bedroom in Ground floor and 4 Bedroom in First Floor Total 3500 sq. Feet. For rent purposes for hospital (partner ship venture) / preschool/bank/ commercial building / with east facing good water supply and parking facilities.
Contact : Dr. Narayan Walavalkar
Mob. 86187 25056
Near Toonz Shop, 7th Main, P.J. Extn, Davangere.

**ಸೈಟುಗಳು ಮಾರಾಟಕ್ಕಿವೆ**
J.H. Patel ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 50x50 East, 50x50 West, 30x54 East, 30x44 North, 30x50 West.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ದೋಸೆ ಸ್ಪೆಷಲಿಸ್ಟ್, ಸೌತ್ ಅಡುಗೆ ಭಟ್ಟರು, ಟೀ, ಕಾಫಿ ಮಾಸ್ಟರ್, ಸಪ್ಲೈಯರ್, ಕಸ, ಪಾತ್ರೆ ತೊಳೆಯಲು ಮಹಿಳೆಯರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ :
ಮೊಬೈಲ್ : 90601 72745

**ಬೇಕಾಗಿದ್ದಾರೆ**
ಬಿಲ್ಲಿಂಗ್ ಮತ್ತು ಟ್ಯಾಲಿ ವಿಭಾಗದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಈ ಕೆಳಗಿನ ವಿಳಾಸಕ್ಕೆ ಬಯೋಡೇಟಾ ಸಮೇತರಾಗಿ ಬರಬೇಕು.
90603 99111, 95353 97599
ಸ್ವಾದ್ ಹೈಪರ್ ಮಾರ್ಟ್
ಪಿ.ಜೆ. ಬಡಾವಣೆ, ದಾವಣಗೆರೆ

**ಬೇಕಾಗಿದ್ದಾರೆ**
SRS SOLAR ENERGY
1) Office Admin - Lady
2) Technician - Boy
ಸಂಪರ್ಕಿಸಿ : 99005 47328
Shivakumar Swamy Badavane, 1st Stage, Behind More.

**Cyber center for Sale**
UPS, Partition, Printer, Gaming Systems.
BIET College Road Davanagere
9964587573
7892459195

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**HOME LOANS**
* House Purchase Loans
* House Purchase Revenue Loans
* House Mortgage Loans
* House Construction Loans
* Site Purchase Loans
* Busines Loans * Salary Loans
* Commircial Building Loans
* Rural housing loans
98455 87805

**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಸೈಟುಗಳು ಮಾರಾಟಕ್ಕಿವೆ**
ಪುಷ್ಪಾ ಮಹಾಲಿಂಗಪ್ಪ ಸ್ಕೂಲ್ ಸುತ್ತಮುತ್ತ 30x38, 30x38 East ಅಕ್ಕಪಕ್ಕ. 30x40 West, 30x50 North, 40x60 North, 60x38 East.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992


**ಶ್ರೀ ದಿವ್ಯ ಹೀಲಿಂಗ್ಸ್**
ನಿದ್ರಾಹೀನತೆ, ಡಿಪ್ರೆಷನ್, ನಿರಾಶಕ್ತಿ, ಕುಟುಂಬ ಕಲಹ, ಉದ್ಯೋಗ ವ್ಯವಹಾರಗಳಲ್ಲಿ ತೊಂದರೆಗಳಿಗೆ ಕಾರಣ ಮತ್ತು ಪರಿಹಾರ ತಿಳಿಯಲು ಇಂದೇ ಸಂಪರ್ಕಿಸಿ :
99726 00713

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**JOBS**
MCS ACADEMY
Training & Placement Cell
98444 92888

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಕೈಲಾಸ ಸಮಾರಾಧನೆ ಆಹ್ವಾನ**
ದಾವಣಗೆರೆ ಸಿಟಿ 43ನೇ ವಾರ್ಡ್ ಶಾಮನೂರು ವಾಸಿ
ದಿ. ಕಣ್ಣಾಳ ದುರುಗಮ್ಮ ಮತ್ತು ದಿ. ಕಣ್ಣಾಳ ರಾಮಪ್ಪ
ಇವರ ಪುತ್ರ ಕಣ್ಣಾಳ ಪ್ರಭು
ಇವರು ಮಾಡುವ ವಿಜ್ಞಾಪನೆಗಳು.
ನನ್ನ ಪುತ್ರ ದಿನಾಂಕ 26.6.2021ರ ಶನಿವಾರ



ಜನನ : 29.09.1991
ಮರಣ : 26.06.2021

ಶ್ರೀ ಕಣ್ಣಾಳ ಪಿ. ಅವಿನಾಶ್ ಅವರು
ನಿಧನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಸಮಾರಾಧನೆ'ಯನ್ನು
ದಿನಾಂಕ 8.7.2021ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಶಾಮನೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಶ್ರೀಮತಿ ಹನುಮಕ್ಕ ಶ್ರೀ ಕಣ್ಣಾಳ ಪ್ರಭು ಹಾಗೂ ಸಹೋದರರು
ಕಣ್ಣಾಳ ಪಿ.ಅಶ್ವಿನಿ ಕೋಂ ಸಿದ್ದಪ್ಪ ಹಾಲುವರ್ತಿ ಮತ್ತು
ಕಣ್ಣಾಳ ಪಿ. ರಮೇಶ್ ಹಾಗೂ ಕಣ್ಣಾಳ ವಂಶಸ್ಥರು
ಶಾಮನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

**ಟೈಪಿಸ್ಟ್ ಬೇಕಾಗಿದ್ದಾರೆ**
Maths equation ಗಳನ್ನು MS Word ನಲ್ಲಿ ಟೈಪ್ ಮಾಡಲು ಹಾಗೂ PPT ಮಾಡಲು ಅನುಭವವುಳ್ಳವರು ಬೇಕಾಗಿದ್ದಾರೆ.
Ph : 95353 83759

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಡಾಲರ್ಸ್ ಕಾಲೋನಿಯಲ್ಲಿ 30/57+56=1695 ಅಳತೆಯ ನಿವೇಶನ ಮಾರಾಟಕ್ಕೆ ಇದೆ (ದಕ್ಷಿಣ ಮುಖ ಸೈಟ್) 100% ಸರಿಯಾದ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳು ಇವೆ.
ಸಂಪರ್ಕಿಸುವ ದೂರವಾಣಿ ನಂ. :
9900637763

**For Immediate Job Hiring**
MI Redmi (Xiami) authorised Service Centre Davangere
1) Need CCO (Customer Care Officers)
2) Office Assistant.
Any Qualification
99801 50048 /63612 09220
email : cv to info@sinaine.com

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ನಗರದ ಎಸ್.ಎಸ್. ಬಡಾವಣೆಯ 'ಬಿ' ಬ್ಲಾಕ್, 3ನೇ ಕ್ರಾಸ್, 3 ನೇ 'ಎ' ಮೇನ್‌ನಲ್ಲಿ (ನೇತಾಜಿ ಒಳಾಂಗಣ ಕ್ರೀಡಾಂಗಣ ಹಿಂಭಾಗದಲ್ಲಿ) 2 ಬೆಡ್ ರೂಮ್ ಇರುವ ಕೆಳಮಹಡಿ ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ : 94484 90099

**MEDICAL REPRESENTATIVE**
Required Medical Representative for a Reputed Pharma Company
Xenono Health Care Pvt. Ltd.
Male/Female
Experienced/Fresher
Mr. Prakash Mob: 97407 52587
Mr. Halesh Mob: 99867 53343

**OPEN SMART FD**
Get guaranteed 31% of return yearly.
No saturation.
No Up's & Downs.
No Market Risk.
With Tax benefits upto 3 lak.
90357 12217

**WANTED**
- Sales girls
- Salesmen
- Cleaning Staff
Contact :
87622 21696


**ಪುಟಗನಾಳ್ ಕೆಂಚನಹಳ್ಳಿ ದುಗ್ಗಮ್ಮ ನಿಧನ**



ದಾವಣಗೆರೆ ತಾಲ್ಲೂಕು ಪುಟಗನಾಳು ಗ್ರಾಮದ ವಾಸಿ ದಿ. ಬಾಲಪ್ಪನವರ ಪತ್ನಿ ಕೆಂಚನಹಳ್ಳಿ ದುಗ್ಗಮ್ಮ (80) ಇವರು ದಿನಾಂಕ 7.07.2021 ರ ಬುಧವಾರ ಬೆಳಿಗ್ಗೆ 7.50 ಕ್ಕೆ ನಿಧನರಾದರು. ಆರು ಜನ ಪುತ್ರರು, ಐವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07.07.2021 ರ ಬುಧವಾರ ಮಧ್ಯಾಹ್ನ 3 ಗಂಟೆಗೆ ದಾವಣಗೆರೆ ತಾಲ್ಲೂಕು ಪುಟಗನಾಳು ಗ್ರಾಮದಲ್ಲಿ ನೆರವೇರಿತು.

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

# ನಟ ದಿಲೀಪ್ ಕುಮಾರ್ ಇನ್ನಿಲ್ಲ

**(1ನೇ ಪುಟದಿಂದ)** ಮನೋಜ್ಞವಾಗಿ ಅಭಿನಯಿಸುವುದಕ್ಕೆ ಹೆಸರು ಮಾಡಿದ್ದ ದಿಲೀಪ್ ಕುಮಾರ್, ಮುಘಲ್ ಎ ಅಜಮ್ ಹಾಗೂ ದೇವದಾಸ್ ಮುಂತಾದ ಚಿತ್ರಗಳಲ್ಲಿ ಅವಿಸ್ಮರಣೀಯ ಅಭಿನಯ ಸಾಮರ್ಥ್ಯ ಪ್ರದರ್ಶಿಸಿದ್ದರು. ಅವರು ಪತ್ನಿ ಸಾಯಿರಾ ಬಾನು ಅವರನ್ನು ಅಗಲಿದ್ದಾರೆ.

ಸಂಜೆ 5 ಗಂಟೆಗೆ ಸಾಂತಾಕ್ರೂಜ್ ಮುಂಬೈ ನಲ್ಲಿರುವ ಜುಹು ಖಬರಸ್ಥಾನದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸ ಲಾಯಿತು. ಕಳೆದ ಮಂಗಳವಾರ ಅವರು ಅಸ್ವಸ್ಥತೆಯಿಂದಾಗಿ ಹಿಂದೂಜ ಆಸ್ಪತ್ರೆಗೆ ದಾಖಲಾಗಿದ್ದರು. ಬುಧವಾರ ಬೆಳಿಗ್ಗೆ 7.30ಕ್ಕೆ ಅವರು ಕೊನೆಯುಸಿರೆಳೆದಿದ್ದಾರೆ. ಬಾಲಿವುಡ್‌ನ ಧರ್ಮೇಂದ್ರ, ಶಬಾನಾ ಅಜ್ಮಿ, ವಿದ್ಯಾ ಬಾಲನ್, ಶಾರುಕ್ ಖಾನ್ ಸೇರಿದಂತೆ ಹಲವರು ಅಂತಿಮ ನಮನ ಸಲ್ಲಿಸಿದ್ದಾರೆ.

ರಾಜ್ ಕಪೂರ್ ಹಾಗೂ ದೇವ್ ಆನಂದ್ ಅವರು ದಿಲೀಪ್ ಕುಮಾರ್ ಸಮಕಾಲೀನರಾಗಿದ್ದರು. ಈ ಮೂವರು ಹಿಂದಿ ಸಿನಿಮಾ ರಂಗದ ಸ್ವರ್ಣ ಕಾಲವನ್ನು ಕಂಡಿದ್ದರು.

ಕಳೆದ ಕೆಲ ವರ್ಷಗಳಲ್ಲಿ ದಿಲೀಪ್ ಕುಮಾರ್ ಅವರು ಕ್ಯಾನ್ಸರ್ ಹಾಗೂ ಶ್ವಾಸಕೋಶ ಕಾಯಿಲೆಗಳನ್ನು ಎದುರಿಸಿದ್ದರು. ಹಲವು ಬಾರಿ ಅವರು ಆಸ್ಪತ್ರೆಗೆ ದಾಖಲಾಗಿ ಬಿಡುಗಡೆಯಾಗಿದ್ದರು. ಅವರ ಮನೆಯಲ್ಲೇ ಮಿನಿ ಐ.ಸಿ.ಯು. ರೂಪಿಸಲಾಗಿತ್ತು ಎಂದು ಆಸ್ಪತ್ರೆ ಮೂಲಗಳು ಹೇಳಿವೆ.

ಯೂಸುಫ್ ಖಾನ್ ಆಗಿ ಪೇಷಾವರಲ್ಲಿ ಡಿಸೆಂಬರ್ 11, 1922ರಲ್ಲಿ ಜನಿಸಿದ್ದ ಅವರು, ಪದ್ಮ ಭೂಷಣ ಹಾಗೂ ಪದ್ಮ ವಿಭೂಷಣ ಪ್ರಶಸ್ತಿ ಗಳಿಸಿದ್ದರು. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯೂ ಅವರಿಗೆ ಸಂದಿತ್ತು.

ಉರ್ದು, ಹಿಂದಿ, ಪಂಜಾಬಿ, ಅವಧಿ, ಭೋಜಪುರಿ, ಮರಾಠಿ, ಬಂಗಾಳಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಅವರು ಪರಿಣಿತರಾಗಿದ್ದರು.

# ಬಕ್ರೀದ್ : ಮನೆಯಲ್ಲೇ ಪ್ರಾರ್ಥಿಸಿ ಕೊರೊನಾ ತಡೆಗಟ್ಟಬೇಕು

## ಜಿಲ್ಲಾಧಿಕಾರಿ ಬೀಳಗಿ



ದಾವಣಗೆರೆ, ಜು.7 - ಕಳೆದ ವರ್ಷದಂತೆಯೇ ಈ ಬಾರಿಯೂ ಬಕ್ರೀದ್ ಹಬ್ಬವನ್ನು ತಮ್ಮ - ತಮ್ಮ ಮನೆಗಳಲ್ಲಿಯೇ ಆಚರಿಸಬೇಕು. ಹಬ್ಬದ ಸಂದರ್ಭದಲ್ಲಿ ಈದ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಲು ಸರ್ಕಾರದ ನಿಯಮಗಳ ಪ್ರಕಾರ ಅವಕಾಶವಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸ್ಪಷ್ಟಪಡಿಸಿದ್ದಾರೆ.

ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಕರೆಯಲಾಗಿದ್ದ ನಾಗರಿಕ ಸೌಹಾರ್ದ ಸಮನ್ವಯತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಸೀದಿ, ಮಂದಿರ ಹಾಗೂ ಚರ್ಚ್ ಸೇರಿದಂತೆ ಎಲ್ಲ ಧಾರ್ಮಿಕ ಕೇಂದ್ರಗಳಲ್ಲಿ ಪೂಜೆ - ಆರಾಧನೆಗೆ ಅವಕಾಶವಿದೆ. ಆದರೆ, ದೊಡ್ಡ ಪ್ರಮಾಣದಲ್ಲಿ ಸಾಮೂಹಿಕವಾಗಿ ಸೇರುವಂತಿಲ್ಲ. ಈ ನಿರ್ಬಂಧ ಇದೇ ದಿನಾಂಕ 19ರವರೆಗೆ ಇದೆ. ಬಹುತೇಕ ಬಕ್ರೀದ್ ಹಬ್ಬ 20 ಇಲ್ಲವೇ 21ರಂದು ಬರಬಹುದು. ಆ ವೇಳೆಗೆ ಸರ್ಕಾರ ನಿರ್ಬಂಧ ಸಡಿಲಿಸಿದರೂ ಸಹ, ಜಿಲ್ಲಾಡಳಿತ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಿನ ನಿರ್ಬಂಧ ಹೇರಲು ಅವಕಾಶ ನೀಡಲಾಗಿದೆ ಎಂದು ಅವರು ತಿಳಿಸಿದರು.

ಕೊರೊನಾ ಮುಗಿತು ಎಂಬ ರೀತಿ ನಡೆದುಕೊಂಡರೆ ಕಷ್ಟ ಎದುರಾಗಲಿದೆ. ಬಹಳ ಜನ ಜೊತೆಯಾಗಬಾರದು. ಈ ಹಿನ್ನೆಲೆಯಲ್ಲಿ ಕಳೆದ ವರ್ಷದಂತೆಯೇ ಈ ವರ್ಷವೂ ಮನೆಯಲ್ಲೇ ಪ್ರಾರ್ಥನೆ ಮೂಲಕ ಬಕ್ರೀದ್ ಆಚರಿಸೋಣ. ಮುಂದಿನ ವರ್ಷ ಪರಿಸ್ಥಿತಿ ಉತ್ತಮವಾದಲ್ಲಿ ನಾನೂ ಸಹ ಆಚರಣೆಯಲ್ಲಿ ಜೊತೆಯಾಗುತ್ತೇನೆ ಎಂದವರು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮಾತನಾಡಿ, ಈಗಾಗಲೇ ಕೆಲ ರಾಜ್ಯಗಳಲ್ಲಿ ಮೂರನೇ ಅಲೆಯ ಪರಿಸ್ಥಿತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮೂರನೇ ಅಲೆ ಬರದಂತೆ ತಡೆಯುವಲ್ಲಿ ಯಶಸ್ಸು ಕಾಣಬೇಕಿದೆ. ಇದಕ್ಕಾಗಿ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂದು ಕರೆ ನೀಡಿದರು.

ಡಿ.ಹೆಚ್.ಓ. ಡಾ. ನಾಗರಾಜ್ ಮಾತನಾಡಿ, ರಾಜ್ಯ ಸರ್ಕಾರ ಅನ್‌ಲಾಕ್ ಅನುಮತಿ ನೀಡಿದ್ದರೂ ಹೆಚ್ಚು ಜನ ಸೇರಬಾರದು. ಜನರು ಎಚ್ಚರಿಕೆ ವಹಿಸಿದರೆ ಕೊರೊನಾ ಪ್ರಕರಣಗಳು ಇನ್ನೂ ಕಡಿಮೆಯಾಗುತ್ತವೆ. ಅರ್ಹ ಎಲ್ಲರೂ ಲಸಿಕೆ ಪಡೆದರೆ ಸಮುದಾಯದಲ್ಲಿ ರೋಗ ನಿರೋಧಕ ಶಕ್ತಿ ಬರುತ್ತದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಜೀವ್, ಜೀವ ಇದ್ದರೆ ಜೀವನ. ತೊಂದರೆಯಾಗುವ ರೀತಿಯಲ್ಲಿ ಹಬ್ಬಗಳನ್ನು ಆಚರಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಹೀಗಾಗಿ ಜಿಲ್ಲೆಯಲ್ಲಿ ಶಾಂತಿ ಸೌಹಾರ್ದತೆಯಿಂದ, ಕಾನೂನು ನಿಯಮಗಳನ್ನು ಪಾಲಿಸುವ ಮೂಲಕ ಕೊರೊನಾ ಹರಡುವುದನ್ನು ತಡೆಗಟ್ಟಲು ಸಹಕರಿಸಿ ಎಂದರು.

ಪಾಲಿಕೆ ಸದಸ್ಯರಾದ ಸೈಯ್ಯದ್ ಚಾರ್ಲಿ, ಸೋಗಿ ಶಾಂತಕುಮಾರ್, ಮುಖಂಡರಾದ ಕೆ.ಬಿ. ಶಂಕರನಾರಾಯಣ, ಕೋಳಿ ಇಬ್ರಾಹಿಂ, ಸತೀಶ್ ಪೂಜಾರ್, ಎಂ.ಜಿ. ಶ್ರೀಕಾಂತ್, ಸೋಮಲಾಪುರದ ಹನುಮಂತಪ್ಪ, ಸಾಧಿಕ್ ಪೈಲ್ವಾನ್, ಗೌಡ್ರ ಚನ್ನಬಸಪ್ಪ, ಆವರಗೆರೆ ವಾಸು. ಫೈರೋಜ್ ಮಾತನಾಡಿದರು.

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಡಿಹೆಚ್‌ಓ ಡಾ.ನಾಗರಾಜ್, ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ಡಿವೈಎಸ್‌ಪಿ ಬಸವರಾಜ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಸುವೇಂದು ಪ್ರಕರಣ ವಿಚಾರಣೆ: ಹಿಂದೆ ಸರಿದ ನ್ಯಾಯಮೂರ್ತಿ

**ವಿವಾದ ಸೃಷ್ಟಿಸಿದ ಮಮತಾ ಬ್ಯಾನರ್ಜಿಗೆ 5 ಲಕ್ಷ ರೂ.ದಂಡ**

ಕೊಲ್ಕೊತಾ, ಜು. 7 – ಬಿಜೆಪಿಯ ಸುವೇಂದು ಅಧಿಕಾರಿ ನಂದಿ ಗ್ರಾಮದಿಂದ ಆಯ್ಕೆಯಾಗಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ದಾಖಲಿಸಿರುವ ಅರ್ಜಿಯ ವಿಚಾರಣೆಯಿಂದ ಹಿಂದೆ ಸರಿದಿರುವ ಕೊಲ್ಕೊತಾ ಹೈಕೋರ್ಟ್ ನ್ಯಾಯಮೂರ್ತಿ ಕೌಶಿಕ್ ಚಂದ, ತಾವು ಹಿಂದೆ ಸರಿಯಲು ವಿವಾದ ಸೃಷ್ಟಿಸಿದ್ದಕ್ಕಾಗಿ ಮಮತಾರಿಗೆ 5 ಲಕ್ಷ ರೂ. ದಂಡ ವಿಧಿಸಿದ್ದಾರೆ.

ನನ್ನ ಎದುರು ಜೂನ್ 24ರಂದು ಮಂಡಿಸಲಾದ ಅರ್ಜಿಯ ವಿಚಾರಣೆಯಿಂದ ಹಿಂದೆ ಸರಿಯು ವಂತೆ ಪ್ರಭಾವ ಬೀರಲು ಉದ್ದೇಶಪೂರ್ವಕ ಪ್ರಯತ್ನಗಳು ನಡೆದಿವೆ ಎಂದಿರುವ ನ್ಯಾಯಮೂರ್ತಿ ಚಂದ, ತೃಣಮೂಲ ಕಾಂಗ್ರೆಸ್ ನಾಯಕರ ಕೆಲ ಸಾಮಾಜಿಕ ಜಾಲತಾಣಗಳ ಪೋಸ್ಟ್‌ಗಳನ್ನು ಉಲ್ಲೇಖಿಸಿದ್ದಾರೆ.

ಯೋಜಿತವಾಗಿ ಮಾನಸಿಕ ದಾಳಿ ನಡೆಸಲಾಗಿದೆ ಎಂದಿರುವ ನ್ಯಾಯಮೂರ್ತಿ, ಈ ವಿವಾದ ಜೀವಂತವಾಗಿಡುವ ಪ್ರಯತ್ನ ತಪ್ಪಿಸಲು ವಿಚಾರಣೆಯಿಂದ ಹಿಂದೆ ಸರಿಯುತ್ತಿದ್ದೇನೆ. ಅರ್ಜಿದಾರರಿಗೆ ಐದು ಲಕ್ಷ ರೂ. ದಂಡ ವಿಧಿಸುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ನ್ಯಾಯಮೂರ್ತಿಯೊಬ್ಬರು ಈ ಹಿಂದೆ ವಕೀಲರಾಗಿದ್ದಾಗ ರಾಜಕೀಯ ಪಕ್ಷವೊಂದರ ಜೊತೆ ಗುರುತಿಸಿಕೊಂಡಿದ್ದರು ಎಂಬ ಕಾರಣಕ್ಕೆ ಅವರು ಪಕ್ಷಪಾತಿ ಎಂದು ಭಾವಿಸಬಾರದು ಎಂದಿರುವ ನ್ಯಾಯಮೂರ್ತಿ, ವಿಪರ್ಯಾಸ ಎಂದರೆ ಈ ಪ್ರಕರಣದಲ್ಲಿ ಅರ್ಜಿದಾರರ ಪರವಾಗಿ ವಾದ ಮಂಡಿಸುತ್ತಿರುವ ಇಬ್ಬರು ಪ್ರಮುಖ ವಕೀಲರು, ಅರ್ಜಿದಾರರ ವಿರೋಧಿ ಪಕ್ಷದಲ್ಲಿದ್ದಾರೆ ಎಂದು ಹೇಳಿದ್ದಾರೆ.

ವಕೀಲರಾದ ಅಭಿಷೇಕ್ ಮನು ಸಿಂಘ್ವಿ ಹಾಗೂ ಎಸ್.ಎನ್. ಮುಖರ್ಜಿ ಅವರು ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಪರ ವಾದ ಮಂಡಿಸುತ್ತಿದ್ದಾರೆ.

ಅರ್ಜಿದಾರರ ಒಪ್ಪಿಗೆ ಇಲ್ಲವೇ ಆಕ್ಷೇಪದ ಮೇಲೆ ನ್ಯಾಯಮೂರ್ತಿಯನ್ನು ವಿಚಾರಣೆಗೆ ನೇಮಿಸಲಾಗದು ಎಂದಿರುವ ನ್ಯಾಯಮೂರ್ತಿ ಚಂದ, ಅದೇ ವಾದದ ಮೇಲೆ ಹೇಳುವುದಾದರೆ ಈ ನ್ಯಾಯಾಲಯದ ಯಾರೊಬ್ಬರೂ ಮುಖ್ಯಮಂತ್ರಿ ಬ್ಯಾನರ್ಜಿ ಅರ್ಜಿ ವಿಚಾರಣೆ ಮಾಡುವಂತಿಲ್ಲ. ಏಕೆಂದರೆ ಇಲ್ಲಿರುವ ಬಹುತೇಕ ನ್ಯಾಯಮೂರ್ತಿಗಳ ನೇಮಕಕ್ಕೆ ಅವರು ಮುಖ್ಯಮಂತ್ರಿಯಾಗಿ ಸಮ್ಮತಿಸಿದ್ದಾರೆ ಇಲ್ಲವೇ ವಿರೋಧಿಸಿದ್ದಾರೆ ಎಂದಿದ್ದಾರೆ.

# ವಿಲೇವಾರಿಗೆ ಟೆಂಡರ್

**(1ನೇ ಪುಟದಿಂದ)** ಜಿಲ್ಲಾಡಳಿತದಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಕರೆಯಲಾಗಿದ್ದ ಸಭೆಯಲ್ಲಿ ನಗರ ವ್ಯಾಪ್ತಿಯಲ್ಲಿನ ಕಸದ ಹಾವಳಿ, ಮಾಂಸ ತ್ಯಾಜ್ಯ, ಗೋವಧೆ ಮತ್ತಿತರೆ ವಿಷಯಗಳು ಪ್ರಸ್ತಾಪವಾದವು.

ಈ ಸಂದರ್ಭದಲ್ಲಿ ಮಾತನಾಡಿದ ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್, ನಗರದ ಸಾಕಷ್ಟು ಮಟನ್ ಹಾಗೂ ಚಿಕನ್ ಅಂಗಡಿಯವರು ತ್ಯಾಜ್ಯವನ್ನು ಪಾಲಿಕೆ ವಾಹನಗಳಿಗೆ ಕೊಡುತ್ತಿಲ್ಲ. ಈ ತ್ಯಾಜ್ಯವನ್ನು ಬಾತಿ ಬಳಿಯ ನೀರಿಗೆ ಹಾಕಲಾಗುತ್ತಿದೆ. ಈ ಜಾಗದಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಮಕ್ಕಳ ಮೇಲೆ ಹಲ್ಲೆ ನಡೆದ ಘಟನೆಯೂ ನಡೆದಿದೆ ಎಂದು ಒತ್ತಾಯಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಮೇಯರ್ ವೀರೇಶ್, ನಗರದಲ್ಲಿ ಬಿಡಾಡಿ ದನ, ನಾಯಿ ಹಾಗೂ ಹಂದಿಗಳ ಹಾವಳಿ ಸಾಕಷ್ಟು ದಿನಗಳಿಂದ ಇದೆ. ಸಮಸ್ಯೆ ಬಗೆಹರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹೆಬ್ಬಾಳು ಬಳಿ ವರಾಹ ಶಾಲೆ ನಿರ್ಮಿಸಲಾಗುತ್ತಿದೆ. ಇಲ್ಲಿ ಸೌಲಭ್ಯ ಕಲ್ಪಿಸುವ ಮೂಲಕ ಹಂದಿಗಳ ಸ್ಥಳಾಂತರಕ್ಕೆ ಮನವೊಲಿಸಲಾಗುತ್ತಿದೆ ಎಂದು ತಿಳಿಸಿದರು.

ಚಿಕನ್ ಹಾಗೂ ಮಟನ್ ತ್ಯಾಜ್ಯವನ್ನು ಖಾಸಗಿ ಏಜೆನ್ಸಿ ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ. ಶೀಘ್ರದಲ್ಲೇ ಈ ಬಗ್ಗೆ ಟೆಂಡರ್ ಕರೆಯಲಾಗುವುದು ಎಂದು ಅವರು ಭರವಸೆ ನೀಡಿದರು.

ಹಿಂದೂ ಜಾಗರಣ ವೇದಿಕೆಯ ಸತೀಶ್ ಪೂಜಾರ್ ಮಾತನಾಡಿದರು. ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಮಾತನಾಡಿ, ಬಕ್ರೀದ್ ವೇಳೆ ನೀರು ಹಾಗೂ ಸ್ವಚ್ಛತೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದರು.

# ಮೋದಿ ಸಂಪುಟಕ್ಕೆ ಸರ್ಜರಿ

**(1ನೇ ಪುಟದಿಂದ)** ಹಾಗೂ ಪಶುಪತಿ ಕುಮಾರ್ ಪರಸ್ ಅವರು ಸಂಪುಟ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಕಿರಣ್ ರಿಜಿಜು, ಆರ್.ಕೆ ಸಿಂಗ್, ಹರ್‌ದೀಪ್ ಸಿಂಗ್ ಪುರಿ, ಮನ್‌ಸುಖ್ ಮಾಂಡವೀಯ, ಪುರುಷೋತ್ತಮ ರುಪಾಲ, ಜಿ. ಕಿಶನ್ ರೆಡ್ಡಿ ಹಾಗೂ ಅನುರಾಗ್ ಠಾಕೂರ ಅವರು ಸಂಪುಟ ದರ್ಜೆಗೆ ಬಡ್ತಿ ಪಡೆದಿದ್ದಾರೆ.

ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿರುವ ಭೂಪೇಂದ್ರ ಯಾದವ್ ಅವರೂ ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 28 ರಾಜ್ಯಖಾತೆ ಸಚಿವರಲ್ಲಿ ಐವರು ಉತ್ತರ ಪ್ರದೇಶದವರಾಗಿದ್ದಾರೆ. ಮುಂದಿನ ವರ್ಷ ರಾಜ್ಯದಲ್ಲಿ ಚುನಾವಣೆ ನಡೆಯಲಿದೆ.

ಪಂಕಜ್ ಚೌಧರಿ, ಅನುಪ್ರಿಯ ಪಟೇಲ್, ಭಾನು ಪ್ರತಾಪ್ ಸಿಂಗ್ ವರ್ಮ, ಕೌಶಲ್ ಕಿಶೋರ್, ಎಸ್. ಪಿ.ಎಸ್. ಬಾಘೇಲ್ ಹಾಗೂ ಅಜಯ್ ಕುಮಾರ್ ಅವರು ಉತ್ತರ ಪ್ರದೇಶದಿಂದ ಸಚಿವರಾಗಿದ್ದಾರೆ. ಉತ್ತರ ಪ್ರದೇಶದಿಂದ ರಾಜ್ಯಸಭಾ ಸದಸ್ಯರಾಗಿರುವ ಬಿ.ಎಲ್. ವರ್ಮ ಸಹ ಸಚಿವರಾಗಿದ್ದಾರೆ.

ಕರ್ನಾಟಕದ ರಾಜೀವ್ ಚಂದ್ರಶೇಖರ್, ಶೋಭ ಕರಂದ್ಲಾಜೆ, ಭಗವಂತ್ ಖೂಬಾ, ಎನ್. ನಾರಾಯಣಸ್ವಾಮಿ ರಾಜ್ಯ ಖಾತೆ ಸಚಿವರಾಗಿದ್ದಾರೆ.

ಉಳಿದಂತೆ ಮೀನಾಕ್ಷಿ ಲೇಖಿ, ಅನ್ನಪೂರ್ಣ ದೇವಿ, ಅಜಯ್ ಭಟ್, ಚೌಹಾಣ್ ದೇವು ಸಿನ್ಹ, ಕಪಿಲ್ ಮೋರೇಶ್ವರ ಪಾಟೀಲ್, ಪ್ರತಿಮಾ ಭೌಮಿಕ್, ಸುಭಾಷ್ ಸರ್ಕಾರ್, ಭಗವತ್ ಕಿಶನ್‌ರಾವ್ ಕರಾಡ್, ರಾಜಕುಮಾರ್ ರಂಜನ್ ಸಿಂಗ್, ಭಾರತಿ ಪವಾರ್, ಬಿಶ್ವೇಶ್ವರ ಟುಡು, ಶಂತನು ಠಾಕೂರ್, ಮಂಜಪರ ಮಹೇಂದ್ರಭಾಯಿ, ಜಾನ್ ಬರ್ಲ, ನಿಸಿತ್ ಪ್ರಾಮಾಣಿಕ್ ಹಾಗೂ ಎಲ್. ಮುರುಗನ್ ಅವರು ಸಚಿವರಾಗಿದ್ದಾರೆ.

ನೂತನ ಸಚಿವರಲ್ಲಿ 16 ಮೊದಲ ಬಾರಿಗೆ ಸಂಸದರಾದವರು.

ರಸಗೊಬ್ಬರ ಖಾತೆ ಸಚಿವ ಡಿ.ವಿ. ಸದಾನಂದ ಗೌಡ, ಕಾರ್ಮಿಕ ಸಚಿವ ಸಂತೋಷ್ ಗಂಗ್ವಾರ್, ಶಿಕ್ಷಣ ಖಾತೆ ಅಧೀನ ಸಚಿವ ಸಂಜಯ್ ಧೊತ್ರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯ ಅಧೀನ ಸಚಿವೆ ದೇಬಶ್ರೀ ಚೌಧರಿ, ಜಲ ಶಕ್ತಿ ಅಧೀನ ಖಾತೆ ಸಚಿವ ಲಾಲ್ ಕಟಾರಿಯ ಹಾಗೂ ಪರಿಸರ ಖಾತೆ ಅಧೀನ ಸಚಿವ ಬಾಬುಲ್ ಸುಪ್ರಿಯೋ ಸಂಪುಟದಿಂದ ಸ್ಥಾನ ಕಳೆದುಕೊಂಡಿದ್ದಾರೆ.

ಕರ್ನಾಟಕದ ರಾಜ್ಯಪಾಲರಾಗಿ ನೇಮಕಗೊಂಡಿದ್ದ ತಾವರ್‌ಚಂದ್ ಗೆಹ್ಲೋಟ್ ಅವರು ನಿನ್ನೆಯಷ್ಟೇ ರಾಜೀನಾಮೆ ನೀಡಿದ್ದರು.

ಬದಲಾವಣೆಯೊಂದಿಗೆ ಪ್ರಧಾನಿ ಮೋದಿ ಹೊಸಬರಿಗೆ ಹೆಚ್ಚು ಅವಕಾಶ ನೀಡಿದ್ದಾರೆ. ಹಲವಾರು ಸಾಮಾಜಿಕ ವರ್ಗಗಳು ಹಾಗೂ ಪ್ರಾಂತ್ಯಗಳಿಗೂ ಪ್ರಾತಿನಿಧ್ಯ ಕಲ್ಪಿಸಿದ್ದಾರೆ.

## ರಾಜ್ಯದ ನಾಲ್ವರು ಸಂಪುಟಕ್ಕೆ

**(1ನೇ ಪುಟದಿಂದ)** ಪ್ರತಿನಿಧಿಸುತ್ತಿರುವುದರಿಂದ ಇದುವರೆಗೂ ಕೇಂದ್ರ ಸಂಪುಟದಲ್ಲಿದ್ದ ಸದಾನಂದ ಗೌಡರು ತಮ್ಮ ಸ್ಥಾನವನ್ನು ಕಳೆದುಕೊಳ್ಳಬೇಕಾಯಿತು.

ಶೋಭಾ ಕರಂದ್ಲಾಜೆ ಅಲ್ಲದೆ, ಬಿಜೆಪಿಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಅವರಿಗೆ ಹತ್ತಿರವಾಗಿರುವ ನಾರಾಯಣಸ್ವಾಮಿ (ಚಿತ್ರದುರ್ಗ) ಹಾಗೂ ಭಗವಂತ ಖೂಬಾ (ಬೀದರ್) ಅವರು ಮೊದಲ ಬಾರಿಗೆ ಕೇಂದ್ರದಲ್ಲಿ ಮಂತ್ರಿಯಾಗುವ ಅವಕಾಶ ದೊರೆಯಿತು. ಇದಲ್ಲದೆ, ಕೇರಳ ಮೂಲದ ಉದ್ಯಮಿ ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್, ಕರ್ನಾಟಕ ಕೋಟಾದಿಂದಲೇ ಮಂತ್ರಿಯಾಗಿದ್ದಾರೆ.

ಎಲ್ಲಾ ನಾಲ್ವರು ಸಚಿವರು ರಾಜ್ಯ ಖಾತೆ ಸಚಿವರಾಗಿದ್ದಾರೆ. ಶೋಭ ಕರಂದ್ಲಾಜೆ ಅವರಿಗೆ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ನೀಡಲಾಗಿದೆ. ರಾಜೀವ್ ಚಂದ್ರಶೇಖರ್ ಅವರಿಗೆ ಕೌಶಲ್ಯಾಭಿವೃದ್ಧಿ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ, ಎ. ನಾರಾಯಣಸ್ವಾಮಿ ಅವರಿಗೆ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ, ಭಗವಂತ ಖೂಬಾ ಅವರಿಗೆ ನವೀಕರಣ ಇಂಧನ ಹಾಗೂ ರಸಾಯನಿಕ ಮತ್ತು ರಸಗೊಬ್ಬರ ಖಾತೆಗಳನ್ನು ನೀಡಲಾಗಿದೆ.

ರಾಜೀವ್ ಚಂದ್ರಶೇಖರ್ ಹೊರತುಪಡಿಸಿ, ರಾಜ್ಯದಿಂದ ಸಂಪುಟ ಸೇರುವ ಉಳಿದ ಮೂವರು ಆರ್.ಎಸ್.ಎಸ್. ಮೂಲದವರಾಗಿದ್ದಾರೆ. ಕೇಂದ್ರ ಸಚಿವರಾಗಿದ್ದ ಸುರೇಶ್ ಅಂಗಡಿ ಸ್ಥಾನಕ್ಕೆ ಲಿಂಗಾಯತ ಸಮುದಾಯದಿಂದ ಭಗವಂತ ಖೂಬಾ ಅವರಿಗೆ ಅವಕಾಶ ದೊರೆಯಿತು.

ಶೋಭಾ ಕರಂದ್ಲಾಜೆ ಮತ್ತು ಖೂಬಾ ಎರಡನೇ ಬಾರಿಗೆ ಸಂಸತ್ ಪ್ರವೇಶಿಸಿದ್ದರೆ, ನಾರಾಯಣಸ್ವಾಮಿ ಇದೇ ಮೊದಲ ಬಾರಿಗೆ ಲೋಕಸಭೆ ಪ್ರವೇಶ ಮಾಡಿದ್ದರು.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಶೋಭಾ ಕರಂದ್ಲಾಜೆ ಅವರು ಸರ್ಕಾರದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದರಿಂದ ದೂರ ಉಳಿದಿದ್ದರು.

ಪಕ್ಷ ಸಂಘಟನೆ ಮತ್ತು ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಯಾವುದೇ ವಿವಾದಕ್ಕೂ ಸಿಲುಕಿರಲಿಲ್ಲ. ರಾಘವೇಂದ್ರ ಅವರಿಗೆ ಅವಕಾಶ ತಪ್ಪಿದ್ದರಿಂದ ಶೋಭಾ ಕೇಂದ್ರದಲ್ಲಿ ಮಂತ್ರಿ ಸ್ಥಾನ ದೊರೆಯುವಂತಾಯಿತು. ಇದರಿಂದ ಪ್ರಧಾನಿಗೆ ಆಪ್ತರಾಗಿದ್ದ ಸದಾನಂದಗೌಡರನ್ನು ರಾಜ್ಯ ರಾಜಕಾರಣಕ್ಕೆ ಕಳುಹಿಸುವ ಸಾಧ್ಯತೆ ಇದೆ. ಮುಂದಿನ ದಿನಗಳಲ್ಲಿ ನಡೆಯುವ ರಾಜಕೀಯ ಬೆಳವಣಿಗೆಗಳ ಮೇಲೆ ಗೌಡರಿಗೆ ಅಧಿಕಾರ ದೊರೆಯುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

# ಕೋವಿಡ್ ನಿರ್ವಹಣೆಯಲ್ಲಿ ಬಿಜೆಪಿ ವಿಫಲ

**(1ನೇ ಪುಟದಿಂದ)** ಇಂಧನಗಳ ಬೆಲೆ ಏರಿಸುವ ಮೂಲಕ ಜನಸಾಮಾನ್ಯರ ಬದುಕನ್ನು ಸಂಕಷ್ಟಕ್ಕೆ ನೂಕಿದೆ. ದೇಶದ ಜನತೆ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ ಕೇಂದ್ರ, ರಾಜ್ಯ ಬಿಜೆಪಿ ಸರ್ಕಾರಗಳ ವಿರುದ್ಧ ಜಾಥಾಗಳ ಮೂಲಕ ಜನರಿಗೆ ತಿಳಿಸಲಾಗುತ್ತಿದೆ ಎಂದರು.

ಕೊರೊನಾದಂತಹ ಸಂಕಷ್ಟದ ಇಂದಿನ ದಿನಮಾನಗಳಲ್ಲಿ ರೈತ ಉತ್ತಿ, ಬಿತ್ತಿ ಬೆಳೆಯಬೇಕಾದರೆ ಟ್ರ್ಯಾಕ್ಟರ್, ಪವರ್ ಟ್ರಿಲ್ಲರ್ ಸೇರಿದಂತೆ ಕೃಷಿ ಪರಿಕರಗಳು ಅಗತ್ಯವಾಗಿ ಬೇಕಾಗಿವೆ. ಸರ್ಕಾರ ಅವುಗಳ ಬೆಲೆಯನ್ನು ದುಪ್ಪಟ್ಟು ಮಾಡಿದೆ. ಇದಲ್ಲದೇ ಕೃಷಿ ಪರಿಕರಗಳಿಗೆ ಬೇಕಾಗುವ ಇಂಧನ ಬೆಲೆ ಏರಿಕೆ ಮಾಡಿರುವ ಕಾರಣ ಆರ್ಥಿಕ ನಷ್ಟ ಅನುಭವಿಸಿರುವ ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ದೂರಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕರಾಳ ಕೃಷಿ ಕಾಯ್ದೆಯಿಂದ ರೈತರು ನೆಮ್ಮದಿ ಕಳೆದುಕೊಂಡು, ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದ ಕಾರಣ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ತೈಲ ಬೆಲೆ ಏರಿಕೆಯಿಂದಾಗಿ ದಿನಸಿ ಬೆಲೆ ಹೆಚ್ಚಳವಾಗಿ ಬಡವರು, ಕೂಲಿ ಕಾರ್ಮಿಕರು ಹಾಗೂ ಜನಸಾಮಾನ್ಯರು ಬದುಕುವುದು ಕಷ್ಟವಾಗಿದೆ. ದಿನಸಿ ಬೆಲೆ ಏರಿಕೆಯಿಂದ ಜನಸಾಮಾನ್ಯರು ತುತ್ತು ಅನ್ನಕ್ಕಾಗಿ ಪರದಾಡುತ್ತಿದ್ದರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇತ್ತ ತಿರುಗಿ ನೋಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೋವಿಡ್ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ ಲಾಕ್‌ಡೌನ್ ಮಾಡಿದ ಪರಿಣಾಮ ಕಾರ್ಖಾನೆಗಳು ಮುಚ್ಚಿ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಪ್ರಧಾನಿ ಮೋದಿಯವರು ಹೇಳಿದ್ದರು. 7 ವರ್ಷದಲ್ಲಿ 14 ಉದ್ಯೋಗ ಸೃಷ್ಟಿ ಮಾಡಬೇಕಿತ್ತು. ಆದರೆ ಪ್ರಧಾನಿ ಮೋದಿಯವರು ಆ ಕೆಲಸ ಮಾಡಲಿಲ್ಲ. ಇದರಿಂದಾಗಿ ಉನ್ನತ ಶಿಕ್ಷಣ ಪಡೆದ ವಿದ್ಯಾವಂತ ಯುವಕರು ಇಂದು ನಿರುದ್ಯೋಗಿಗಳಾಗಿ ಬೀದಿಗಳಲ್ಲಿ ಪದವಿ ಸರ್ಟಿಫಿಕೆಟ್ ಹಿಡಿದುಕೊಂಡು ಭಿಕ್ಷೆ ಬೇಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚಾಮರಾಜನಗರದಲ್ಲಿ ಆಮ್ಲಜನಕ ಕೊರತೆಯಿಂದ ಕೇವಲ ಮೂರು ಜನ ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವ ಡಾ. ಸುಧಾಕರ್ ಹೇಳಿದ್ದರು. ಆದರೆ ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭೇಟಿ ನೀಡಿದಾಗ ಆಸ್ಪತ್ರೆಯಲ್ಲಿ 36 ಜನ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಈ ರೀತಿ ಎಲ್ಲಾ ವಿಷಯಗಳಲ್ಲೂ ಸರ್ಕಾರ ತಪ್ಪು ಮಾಹಿತಿ ಕೊಡುತ್ತಿದೆ. ಆ ಕಾರಣಕ್ಕಾಗಿ ಜು.30ರೊಳಗೆ ನಮ್ಮ ಕಾರ್ಯಕರ್ತರು ಮನೆ ಮನೆಗೆ ಹೋಗಿ ಕೋವಿಡ್ ಸಂದರ್ಭದಲ್ಲಿ ಅವರ ಪರಿಸ್ಥಿತಿ ಹೇಗಿತ್ತು, ಸರ್ಕಾರ ಯಾವ ರೀತಿ ಸ್ಪಂದಿಸಿತು ಎಂಬ ಬಗ್ಗೆ ಮಾಹಿತಿ ಪಡೆದು ಕೆಪಿಸಿಸಿಗೆ ಕಳುಹಿಸುತ್ತಾರೆ. ಅದನ್ನು ಕೆಪಿಸಿಸಿ ರಾಜ್ಯ ಸರ್ಕಾರದ ಗಮನಕ್ಕೆ ತರಲಿದೆ ಎಂದು ಮುನಿಯಪ್ಪ ತಿಳಿಸಿದರು.

ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಮಾತನಾಡಿ, ಬಿಜೆಪಿ ಅಧಿಕಾರಕ್ಕೆ ಬಂದಾದ ಮೇಲೆ ಸಾಕಷ್ಟು ದುರಂತಗಳಾಗಿವೆ. ತೈಲ ಬೆಲೆ ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ ಬೆಲೆ ಗಗನ ಮುಖಿಯಾಗಿದೆ. ಇದಕ್ಕೆ ಬಿಜೆಪಿಯ ಜನ ವಿರೋಧಿ ನೀತಿಯೇ ಕಾರಣ. ಬೆಲೆಯನ್ನು ಹತೋಟಿಯಲ್ಲಿಡಲು ಕಾಂಗ್ರೆಸ್‌ಗೆ ಮಾತ್ರ ಸಾಧ್ಯವಿದ್ದು, ಈ ಪಕ್ಷದ ಅಗತ್ಯವಿದೆ. ಕಾಂಗ್ರೆಸ್ ಬಡವರಿಗಾಗಿ ಹಲವು ಯೋಜನೆಗಳನ್ನು ತಂದಿದೆ ಎಂದು ಹೇಳಿದರು.

ಕಾಂಗ್ರೆಸ್‌ನಲ್ಲಿ ಒಗ್ಗಟ್ಟು ಇದೆ. ಅದನ್ನು ಕಾಪಾಡಿಕೊಂಡು ಕೊರೊನಾ, ಬ್ಲ್ಯಾಕ್ ಫಂಗಸ್‌ನಿಂದ ಸಂಕಷ್ಟಕ್ಕೆ ತುತ್ತಾದವರಿಗೆ ಸ್ಪಂದಿಸಿ ಜನರ ಪ್ರಾಣ ಉಳಿಸುವ ಜನಪರ ಕೆಲಸವನ್ನು ಪಕ್ಷದ ನಾವೆಲ್ಲರೂ ಒಟ್ಟಾಗಿ ಮಾಡೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಅನಿತಾಬಾಯಿ ಮಾಲತೇಶ್ ಜಾಧವ್, ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಪಾಲಿಕೆ ಸದಸ್ಯರಾದ ಚಮನ್‌ಸಾಬ್, ಅಬ್ದುಲ್ ಲತೀಫ್, ಗಡಿಗುಡಾಳ್ ಮಂಜುನಾಥ್, ವಿನಾಯಕ ಪೈಲ್ವಾನ್, ಜೆ.ಡಿ. ಪ್ರಕಾಶ್, ಸುಧಾ ಇಟ್ಟಿಗುಡಿ ಮಂಜುನಾಥ್, ಮುಖಂಡರುಗಳಾದ ಮಾಲತೇಶ್ ರಾವ್ ಜಾಧವ್, ಅಯೂಬ್ ಪೈಲ್ವಾನ್, ಸೀಮೆಎಣ್ಣೆ ಮಲ್ಲೇಶ್, ಗುರಪ್ಪ ನಾಯ್ಡು, ಸುಂದರೇಶ್, ಅಮೃತೇಶ್, ಶುಭಮಂಗಳ ಸೇರಿದಂತೆ ಇತರರು ಇದ್ದರು.

## ಜನಪರ ಬದ್ಧತೆ ತೋರುವ ಕಾಂಗ್ರೆಸ್

ಕೋವಿಡ್ ಸಂಕಷ್ಟದಲ್ಲಿ ಆರೋಗ್ಯ, ಆಹಾರ ಹಾಗೂ ತುರ್ತು ಸೇವೆಗಳನ್ನು ಒದಗಿಸುವುದು, ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ ಸಾಂತ್ವನ ಹೇಳುವ ಮುಖೇನ ಕಾಂಗ್ರೆಸ್ ಜನಪರವಾಗಿ ಸ್ಪಂದಿಸುತ್ತಿದೆ. ಇದು ಕಾಂಗ್ರೆಸ್ ಪಕ್ಷದ ಸಿದ್ಧಾಂತ ಮತ್ತು ಬದ್ಧತೆಯಾಗಿದೆ ಎಂದು ಮಾಜಿ ಕೇಂದ್ರ ಸಚಿವ ಕೆ.ಹೆಚ್. ಮುನಿಯಪ್ಪ ತಿಳಿಸಿದರು.

ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ, ರಾಹುಲ್‌ಗಾಂಧಿ ಸೂಚಿಸಿರುವಂತೆ ಕೋವಿಡ್‌ನಿಂದ ಸಂಕಷ್ಟದಲ್ಲಿ ಇರುವ ಜನರಿಗೆ ಆಂಬ್ಯುಲೆನ್ಸ್ ವ್ಯವಸ್ಥೆ, ಆಹಾರ ಕಿಟ್‌ಗಳ ವಿತರಣೆ ಸೇರಿದಂತೆ ತುರ್ತು ಸೇವೆಗಳನ್ನು ಮಾಡಲು ಮುಂದಾಗಿದ್ದೇವೆ. ಈ ಹಿನ್ನೆಲೆಯಲ್ಲಿ ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ ಕಾಂಗ್ರೆಸ್ ಕಾರ್ಯಕರ್ತರು ಮನೆ ಮನೆಗೆ ಹೋಗಿ ಜನರ ಸಂಕಷ್ಟ ಅರಿತು ಸ್ಪಂದಿಸುವ ಕೆಲಸ ಮಾಡುತ್ತಿದ್ದಾರೆ. ಶಾಮನೂರು ಮಲ್ಲಿಕಾರ್ಜುನ್ ಅವರು ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ 10 ಸಾವಿರ ರೂ. ವೈಯಕ್ತಿಕ ನೆರವು ನೀಡಿದ್ದಾರೆ ಎಂದು ಹೇಳಿದರು.

ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಸ್ವಂತ ಹಣದಲ್ಲಿ ಲಸಿಕೆ ಖರೀದಿಸಿ ಜನರಿಗೆ ಹಾಕುವ ಮೂಲಕ ಜನರ ಜೀವ ಉಳಿಸುವ ಕೆಲಸ ಮಾಡುತ್ತಿದ್ದಾರೆ. ಇವರು ಮಾಡುವ ಸೇವೆಯನ್ನು ರಾಜ್ಯದಲ್ಲಿ ಯಾರೂ ಮಾಡಿಲ್ಲ. ಇಂತಹ ಮಾದರಿ ಕೆಲಸದಿಂದ ಕೀರ್ತಿಗೆ ಭಾಜನರಾಗಿದ್ದಾರೆ ಎಂದು ಮುನಿಯಪ್ಪ ಶ್ಲಾಘಿಸಿದರು.

## ಆರಂಭಿಕ ಸ್ಥಳದ ಬಳಿಯೇ ಸೈಕಲ್ ಜಾಥಾ ಮೊಟಕು

ಇಂಧನ, ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್‌ನಿಂದ ಇಂದು ಏರ್ಪಾಡಾಗಿದ್ದ ಸೈಕಲ್ ಜಾಥಾವು ಆರಂಭಿಕ ಸ್ಥಳವಾದ ನಗರ ದೇವತೆ ದುರ್ಗಾಂಬಿಕ ದೇವಸ್ಥಾನದ ಎದುರೇ ಪೊಲೀಸರು ತಡೆದ ಕಾರಣ ಜಾಥಾ ಮೊಟಕುಗೊಂಡಿತು.

ಕೇಂದ್ರ ಮಾಜಿ ಸಚಿವ ಕೆ.ಹೆಚ್. ಮುನಿಯಪ್ಪ ಹಾಗೂ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ ಅವರಿಂದ ಚಾಲನೆ ಪಡೆದ ಜಾಥಾವು ಎಸ್‌ಕೆಪಿ ರಸ್ತೆಯ ಮೂಲಕ ಜಯದೇವ ವೃತ್ತದತ್ತ ತೆರಳಬೇಕಿತ್ತು. ಆದರೆ, ಜಾಥಾ ಹೊರಟು ಅಣತಿ ದೂರಕ್ಕೆ ಬರುತ್ತಿದ್ದಂತೆ ಡಿವೈಎಸ್‌ಪಿ ನಾಗೇಶ್ ಐತಾಳ್ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿಗಳು ರಸ್ತೆಗೆ ಅಡ್ಡವಾಗಿ ನಿಂತು ಜಾಥಾ ತಡೆದರು. ಅಲ್ಲದೇ ದೇವಸ್ಥಾನದ ಆವರಣದಿಂದ ಜಾಥಾ ಹೊರಡುವ ಮಾರ್ಗದಲ್ಲಿ ಪೊಲೀಸರು ಬ್ಯಾರಿಕೇಡ್ ನಿರ್ಮಿಸಿದ್ದರ ಕಾರಣ ಜಾಥಾ ಮುಂದಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಸ್ಥಳದಲ್ಲೇ ಬಹಿರಂಗ ಸಭೆ ನಡೆಸಿ ಜಾಥಾವನ್ನು ಮುಕ್ತಾಯಗೊಳಿಸಲಾಯಿತು.

## ಸಣ್ಣತನ ಬಿಟ್ಟು ಲಸಿಕೆ ನೀಡಲಿ

**(1ನೇ ಪುಟದಿಂದ)** ಸರಿಯಾಗಿ ಲಸಿಕೆ ನೀಡುತ್ತಿದ್ದೇವೆ. ಇದರ ಜೊತೆಗೆ ಸರ್ಕಾರ ಸಣ್ಣತನ ಬಿಟ್ಟು ಲಸಿಕೆ ತಂದರೆ ವಾರ್ಡ್ ವ್ಯಾಪ್ತಿ ಲಸಿಕೆ ಪೂರ್ಣಗೊಳಿಸಲು ಸಾಧ್ಯವಾಗಲಿದೆ. ಆ ಮುಖೇನ ಜನರ ಪ್ರಾಣ ಉಳಿಸುವ ಕೆಲಸವಾಗಲಿದೆ ಎಂದು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಸಲಹೆ ನೀಡಿದರು.

## ಕುಶಲಕರ್ಮಿಗಳಿಗೆ ಪರಿಹಾರಕ್ಕೆ ಅರ್ಜಿ

ದಾವಣಗೆರೆ, ಜು.7 - ಚರ್ಮ ಕುಶಲ ಕರ್ಮಿಗಳಿಗೆ ಸರ್ಕಾರದಿಂದ ನೀಡಲಾಗುವ ಕೋವಿಡ್-19 ಲಾಕ್‌ಡೌನ್ ಪರಿಹಾರಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 31 ರವರೆಗೆ ವಿಸ್ತರಿಸಲಾಗಿದೆ.

ಪಾದರಕ್ಷೆಗಳ ತಯಾರಿಕೆ, ದುರಸ್ತಿ ಹಾಗೂ ಚರ್ಮ ಹದ ಮಾಡುವ ಕಾಯಕದಲ್ಲಿ ತೊಡಗಿರುವ ಚಮ್ಮಾರರು, ಚರ್ಮಕುಶಲ ಕರ್ಮಿಗಳಿಗೆ ಸರ್ಕಾರ ರೂ.2000 ಪರಿಹಾರ ನೀಡುವ ಯೋಜನೆ ಘೋಷಿಸಿದೆ.

ಅರ್ಹ ಚರ್ಮಕುಶಲ ಕರ್ಮಿಗಳು ಪರಿಹಾರ ಹಣ ಪಡೆಯಲು ಆನ್‌ಲೈನ್ ಮೂಲಕ ಸೇವಾ ಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 9741833307 ಕ್ಕೆ ಸಂಪರ್ಕಿಸಬಹುದು.

## 46 ಪಾಸಿಟಿವ್, 110 ಗುಣಮುಖ

ದಾವಣಗೆರೆ, ಜು.7- ಜಿಲ್ಲೆಯಲ್ಲಿ ಬುಧವಾರ 46 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಇಬ್ಬರು ಮೃತಪಟ್ಟಿದ್ದಾರೆ. 110 ಜನರು ಗುಣ ಮುಖರಾಗಿದ್ದಾರೆಂದು ಜಿಲ್ಲಾಧಿಕಾರಿ ಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 22, ಹರಿಹರ 6, ಜಗಳೂರು 1, ಚನ್ನಗಿರಿ 6, ಹೊನ್ನಾಳಿ ತಾಲ್ಲೂಕಿನಲ್ಲಿ 6 ಹಾಗೂ ಹೊರ ಜಿಲ್ಲೆಯ 5 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 727 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 569 ಜನರು ಮೃತಪಟ್ಟಿದ್ದಾರೆ.


## ಕಾಣೆಯಾಗಿದ್ದಾರೆ



ಹೊನ್ನಾಳಿ ತಾಲ್ಲೂಕು ಕೋಟೆಮಲ್ಲೂರು ಗ್ರಾಮದ **ಹನುಮಂತಪ್ಪ** ತಂದೆ **ನಾಗಪ್ಪ** (28 ವರ್ಷ) ಇವರು ಕಾಣೆಯಾಗಿದ್ದಾರೆ. ನಾವು ಇವರನ್ನು ಸಾಕಷ್ಟು ಹುಡುಕಿದರೂ ಸಿಕ್ಕಿರಲಿಲ್ಲ. ಕಾಣೆಯಾದ 3-4 ವರ್ಷಗಳ ನಂತರ ಮನೆಗೆ ವಾಪಸ್ಸಾಗಿದ್ದರು. ನಂತರ ದಿನಾಂಕ 15.07.2012ರಂದು ಬೆಳಿಗ್ಗೆ 10 ಗಂಟೆಗೆ ಬೇಲಿಮಲ್ಲೂರು ಮನೆಯಿಂದ ಹೋದವರು ಇದುವರೆಗೂ ವಾಪಸ್ ಬಂದಿಲ್ಲ. ಈತನನ್ನು ಹುಡುಕಲು ಸಾಕಷ್ಟು ಪ್ರಯತ್ನ ಮಾಡಿ ವಿಫಲರಾಗಿದ್ದೇವೆ. 5.5 ಅಡಿ ಎತ್ತರ, ಎಣ್ಣೆಗೆಂಪು ಬಣ್ಣ, ದುಂಡು ಮುಖ, ಎಡ ತುಟಿಯ ಹತ್ತಿರ ಹಳೆಯ ಗಾಯದ ಗುರುತು ಇರುತ್ತದೆ. ಕಪ್ಪುಬಣ್ಣದ ಕೂದಲು, ಕಪ್ಪು ಗಡ್ಡ, ಮೀಸೆ ಹೊಂದಿರುತ್ತಾನೆ. ಈತನ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ಕೂಡಲೇ ಹೊನ್ನಾಳಿ ಪೊಲೀಸ್ ಠಾಣೆಗೆ ಅಥವಾ ಈ ಕೆಳಕಂಡ ಫೋನ್ ನಂಬರ್‌ಗೆ ತಿಳಿಸಬೇಕಾಗಿ ಪಿರ್ಯಾದುದಾರರಾದ ಶ್ರೀಮತಿ ರೇಣುಕಮ್ಮ ಕೋಂ ನಿಂಗಪ್ಪ ವಿನಂತಿಸಿದ್ದಾರೆ.

**ಹೊನ್ನಾಳಿ ಪೊಲೀಸ್ ಠಾಣೆ, 08188-251100**
**ಹೊನ್ನಾಳಿ ಪೊಲೀಸ್ ಠಾಣೆ ಪಿಎಸ್‌ಐ, 9480803263**
**ದಾವಣಗೆರೆ ಕಂಟ್ರೋಲ್ ರೂಂ, 08192-253100**

## ಕಾಣೆಯಾಗಿದ್ದಾರೆ



ದಾವಣಗೆರೆ ಶ್ರೀರಾಮ ಬಡಾವಣೆ ಅಮಾಸೆ ಹೋಟೆಲ್ ಹತ್ತಿರದ ವಾಸಿ ಜಯಣ್ಣ ರೆಡ್ಡಿ ಇವರ ಪುತ್ರ **ಓಂಕಾರ ರೆಡ್ಡಿ** (52 ವರ್ಷ) ಇವರು ದಿನಾಂಕ 20.03.2020 ರಂದು ಮನೆಯಿಂದ ಹೊರ ಹೋದವರು ಇದುವರೆಗೂ ಮನೆಗೆ ಹಿಂತಿರುಗಿ ಬಂದಿರುವುದಿಲ್ಲ. 5.2 ಅಡಿ ಎತ್ತರ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು, ದುಂಡು ಮುಖ, ಕಪ್ಪು ಕೂದಲು, ಬಿಳಿ ಅಂಗಿ, ಕಪ್ಪು ಪ್ಯಾಂಟ್ ಧರಿಸಿದ್ದಾರೆ.

ಈತನ ಸುಳಿವು ಯಾರಿಗಾದರೂ ಸಿಕ್ಕಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಕೆಟಿಜೆ ನಗರ ಠಾಣೆಗೆ ಮಾಹಿತಿ ನೀಡಲು ಕೋರಿದೆ.

**ಸಿಪಿಐ ದಕ್ಷಿಣ ವೃತ್ತ (08192-259293).**
**ಕೆಟಿಜೆ ನಗರ ಠಾಣೆ (08192-259285).**
**94808 03250 ಗೆ ಸಂಪರ್ಕಿಸಲು ಕೋರಲಾಗಿದೆ.**

## ಸಂಪುಟದಲ್ಲಿ ಪ್ರಮುಖ ಬದಲಾವಣೆ

**(1ನೇ ಪುಟದಿಂದ)** ಸಹಕಾರ ಸಚಿವಾಲಯ ಪಡೆದಿದ್ದಾರೆ. ಪಿಯೂಶ್ ಗೋಯಲ್ ಅವರು ವಾಣಿಜ್ಯ ಮತ್ತು ಪಡಿತರ ಸಚಿವಾಲಯಗಳ ಜೊತೆಗೆ ಜವಳಿ ಖಾತೆಯನ್ನೂ ಪಡೆದಿದ್ದಾರೆ.

ಧರ್ಮೇಂದ್ರ ಪ್ರಧಾನ್ ಅವರು ನೂತನ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಾಗಿದ್ದಾರೆ. ರಾಮಚಂದ್ರ ಪ್ರಸಾದ್ ಸಿಂಗ್ ಅವರು ಉಕ್ಕು ಸಚಿವರಾಗಿದ್ದರೆ, ಪಶುಪತಿ ಕುಮಾರ್ ಪಾರಸ್ ಅವರು ಆಹಾರ ಸಂಸ್ಕರಣಾ ಖಾತೆ ಪಡೆದಿದ್ದಾರೆ. ಕಿರಣ್ ರಿಜಿಜು ಅವರು ಕಾನೂನು ಮತ್ತು ನ್ಯಾಯ, ಹರ್‌ದೀಪ್ ಸಿಂಗ್ ಪುರಿ ಅವರು ಪೆಟ್ರೋಲಿಯಂ ಮತ್ತು ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯಗಳನ್ನು ಪಡೆದಿದ್ದಾರೆ.


## ಸಾರ್ವಜನಿಕ ಪ್ರಕಟಣೆ

**ಶ್ರೀ ಯಜಮಾನ್ ಮೋತಿ ವೀರಣ್ಣ ಬಿನ್ ಲೇಟ್ ಯಜಮಾನ್ ಮೋತಿ ದೊಡ್ಡಪ್ಪ, ಮತ್ತು ಯಜಮಾನ್ ಮೋತಿ ರಾಜೇಂದ್ರ ಬಿನ್ ಯಜಮಾನ್ ಮೋತಿ ವೀರಣ್ಣ, ವಾಸ: # 2645/3 (2645/1), 2ನೇ ಕ್ರಾಸ್, 1ನೇ ಮೇನ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ** ಆದ ನಾನು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 12, ಚಾಮರಾಜಪೇಟೆ, ಡೋರ್ ನಂ. 276/1, ಅಳತೆ 10x120 ಅಡಿಗಳ ಸ್ವತ್ತನ್ನು ಶ್ರೀಮತಿ ಬೆಳ್ಳೂಡಿ ಜಯಶ್ರೀ ಕೋಂ ಲೇಟ್ ಬಿ.ಎಂ. ವೀರೇಶ್ ಹಾಗೂ ಮಕ್ಕಳಾದ ಶ್ರೀ ಹರೀಶ್ ಬಿ.ವಿ. ಮತ್ತು ಶ್ರೀ ನವೀನ್ ಬಿ.ವಿ. ಬಿನ್ ಬಿ.ಎಂ. ವೀರೇಶ್ ಇವರುಗಳ ಹೆಸರಿಗೆ ಜಂಟಿಯಾಗಿ ದಿನಾಂಕ: 08-07-2019 ರಲ್ಲಿ ಖಾತೆ ವರ್ಗಾವಣೆಯಾಗಿದ್ದು, ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ಕಲಂ 114 (ಎ) ರ ರೀತ್ಯಾ ಮಹಾನಗರ ಪಾಲಿಕೆ ಆಯುಕ್ತರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಶ್ರೀಮತಿ ಬೆಳ್ಳೂಡಿ ಜಯಶ್ರೀ ಕೋಂ ಲೇಟ್ ಬಿ.ಎಂ. ವೀರೇಶ್ ಹಾಗೂ ಮಕ್ಕಳಾದ ಶ್ರೀ ಹರೀಶ್ ಬಿ.ವಿ. ಮತ್ತು ಶ್ರೀ ನವೀನ್ ಬಿ.ವಿ. ಬಿನ್ ಬಿ.ಎಂ. ವೀರೇಶ್ ಇವರುಗಳ ಹೆಸರಿಗೆ ಜಂಟಿಯಾಗಿದ್ದ ಸದರಿ **ಅಕ್ರಮ ಖಾತೆಯನ್ನು ರದ್ದುಗೊಳಿಸಿ, ಶ್ರೀಮತಿ ಬಿ.ಎಂ. ಸುಶೀಲಮ್ಮ ಕೋಂ ಬೆಳ್ಳೂಡಿ ಮುದ್ದಪ್ಪ** ಇವರ ಹೆಸರಿನಲ್ಲುಳ್ಳ ಖಾತೆಯನ್ನು ಯಥಾಸ್ಥಿತಿ ಮುಂದುವರೆಸಿ **ದಿನಾಂಕ: 16-06-2021 ರಂದು** ಆದೇಶಿಸಿದೆ.

ಕೆಳಕಂಡ ಸೊತ್ತಿಗೆ ಸಂಬಂಧವಾಗಿ ಯಾರಾದರೂ ಕ್ರಯ, ಬಾಡಿಗೆ, ಲೀಜ್ ಹಾಗೂ ಇತ್ಯಾದಿಗಳಿಗೆ ವ್ಯವಹರಿಸಬಾರದೆಂದು, ಯಾರೂ, ಯಾವ ವಿಧದಿಂದಲೂ ವ್ಯವಹರಿಸಬಾರದೆಂದು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

**- : ಷೆಡ್ಯೂಲ್ ಸೊತ್ತು : -**

ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ಸಿಟಿ, ಚಾಮರಾಜಪೇಟೆ ಮುಖ್ಯರಸ್ತೆಯಲ್ಲಿ ಬರತಕ್ಕ ಡೋರ್ ನಂ. 276/1 ರಲ್ಲಿ ಅಳತೆ : ಪೂರ್ವ - ಪಶ್ಚಿಮ 120 ಅಡಿ, ಉತ್ತರ-ದಕ್ಷಿಣ 10 ಅಡಿ ಉಳ್ಳ ಜಾಗದಲ್ಲಿ ನಿರ್ಮಿಸಿರುವ ವಾಣಿಜ್ಯೋಪಯೋಗಿ ಕಟ್ಟಡ **ಚೆಕ್ಕುಬಂದಿ:** ಪೂರ್ವಕ್ಕೆ - 20 ರಸ್ತೆ, ಪಶ್ಚಿಮಕ್ಕೆ - ಚಾಮರಾಜಪೇಟೆ ಮುಖ್ಯ ರಸ್ತೆ, ಉತ್ತರಕ್ಕೆ – ಬಿ. ಚನ್ನಬಸಪ್ಪನವರ ಬಿಲ್ಡಿಂಗ್, ದಕ್ಷಿಣಕ್ಕೆ - ಯಲವಟ್ಟಿ ಮಂಜುನಾಥ (ಹಿಂದಿನ ಮಾಲೀಕರು: ವೈ.ಎಂ. ನಾಗರಾಜ & ವೈ.ಎಂ. ವಿಶ್ವನಾಥ) ಇವರ ಸೊತ್ತು, ಈ ಮಧ್ಯದ ಪೂರಾ ಸೊತ್ತು ಒಂದು.

ಸ್ಥಳ: ದಾವಣಗೆರೆ
ದಿನಾಂಕ: 08-07-2021

**ಯಜಮಾನ್ ಮೋತಿ ವೀರಣ್ಣ,**
**ಮಾಜಿ ಶಾಸಕರು, ದಾವಣಗೆರೆ.**
**ಯಜಮಾನ್ ಮೋತಿ ರಾಜೇಂದ್ರ**

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬನಶಂಕರಿ ಬಡಾವಣೆ, ಬನಶಂಕರಿ ಪಾರ್ಕ್ ಹತ್ತಿರ, ಫಿಶ್ ಲ್ಯಾಂಡ್ ಮತ್ತು ಉದಯ ಶಿವಕುಮಾರ್ ಮನೆ ಹತ್ತಿರ ಮತ್ತು ಸುತ್ತಮುತ್ತ ಇಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.



### ಹುಟ್ಟುಹಬ್ಬದ ಶುಭಾಶಯಗಳು

ಇಂದು ತಮ್ಮ ಸಾರ್ಥಕ ಜೀವನದ
41 ವಸಂತಗಳನ್ನು ಪೂರೈಸಿ,
42ನೇ ವಸಂತಕ್ಕೆ ಪಾದಾರ್ಪಣೆ
ಮಾಡುತ್ತಿರುವ ದಾವಣಗೆರೆ ಜಿಲ್ಲಾ
ವಕೀಲರ ಸಂಘದ ಕಾರ್ಯದರ್ಶಿಗಳೂ ಆದ

**ಶ್ರೀ ಲೋಕಿಕೆರೆ ಹೆಚ್. ಪ್ರದೀಪ್**

ಅವರಿಗೆ ಜನ್ಮದಿನದ
ಶುಭಾಶಯಗಳು.

ಶುಭ ಕೋರುವವರು :

ಜಿಲ್ಲಾ ವಕೀಲರ ಸಂಘ (ರಿ.)
ಜಿಲ್ಲಾ ಕಾಂಗ್ರೆಸ್ ಕಾನೂನು ಘಟಕ
ಬೀರೇಶ್ವರ ವಿದ್ಯಾವರ್ಧಕ ಸಂಘ (ರಿ.)
ಶ್ರೀ ಶೈಲ ಮಠ ಕಾಂಪ್ಲೆಕ್ಸ್ ವಕೀಲ ಮಿತ್ರರು
ದಾವಣಗೆರೆ ಹಾಗೂ ಸ್ನೇಹಿತರು,
ಹಿತೈಷಿಗಳು, ಬಂಧು-ಮಿತ್ರರು
ಮತ್ತು ಲೋಕಿಕೆರೆ ಗ್ರಾಮಸ್ಥರು.

### ಭಾವಪೂರ್ಣ ಶ್ರದ್ಧಾಂಜಲಿ




ದಾವಣಗೆರೆಯ ದಿಗಂಬರ ಜೈನ ಸಮಾಜದ
ಶತಾಯುಷಿ ಮಾತೆ

**ಶ್ರೀಮತಿ ರಾಜಮತಿ ಅಮ್ಮನವರು**

(ಪಾರ್ಶ್ವನಾಥ ಜಿನಮಂದಿರದ ಸಂರಕ್ಷಕ ಪುರೋಹಿತರ ತಾಯಿ)
ಅವರು ದಿನಾಂಕ 7-7-2021ರಂದು ಜಿನೈಕ್ಯರಾಗಿದ್ದಾರೆ.
ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ಸಮಸ್ತ ದಿಗಂಬರ ಜೈನ ಸಮಾಜದ ಶ್ರಾವಕರು ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದೇವೆ.

**ಪಾರ್ಶ್ವನಾಥ ಟೆಂಪಲ್ ಟ್ರಸ್ಟ್
ಮಹಾವೀರ ಯುವ ಮಂಚ್ ಹಾಗೂ
ಸಮಸ್ತ ದಿಗಂಬರ ಜೈನ ಸಮಾಜ**

### ಅಭಿಷೇಕ್ ಪೌಲ್ಟ್ರಿ ಫಾರಂ

ನಮ್ಮಲ್ಲಿ ಮಧ್ಯಪ್ರದೇಶ ಮೂಲದ ಒರಿಜಿನಲ್, ಆರೋಗ್ಯಕ್ಕೆ ಉತ್ತಮವಾಗಿರುವ ಅತೀ ಕಡಿಮೆ ಕೊಲೆಸ್ಟ್ರಾಲ್‌ವುಳ್ಳ ಅತೀ ಹೆಚ್ಚು ಬೇಡಿಕೆಯುಳ್ಳ ಹಾಗೂ ರುಚಿಕರವಾದ ಜೀವಂತ ಕಡಕ್ನಾಥ್ (ಕಪ್ಪು ಕೋಳಿಗಳು) ಕಡಕ್ನಾಥ್ ಕೋಳಿ ಮರಿಗಳು, ನಾಟಿ ಕೋಳಿ ಮರಿಗಳು ಹಾಗೂ ಅತೀ ಹೆಚ್ಚು ಪ್ರೊಟೀನ್ ಇರುವ ಕಡಕ್ನಾಥ್ ಕೋಳಿ ಮೊಟ್ಟೆಗಳು ಅತ್ಯಂತ ಆಕರ್ಷಕ ಹಾಗೂ ಕೈಗೆಟುಕುವ ಬೆಲೆಯಲ್ಲಿ ದೊರೆಯುತ್ತದೆ. ಕೂಡಲೇ ಸಂಪರ್ಕಿಸಿ.

ತಪೋವನ ಎದುರು , ನೀಲಾನಹಳ್ಳಿ, ದೊಡ್ಡಬಾತಿ, ದಾವಣಗೆರೆ-577566.

ದೂರವಾಣಿ ಸಂಖ್ಯೆ : 8861405888, 9880853777


### ವೈಕುಂಠ ಸಮಾರಾಧನೆ



ದಾವಣಗೆರೆ ವಿದ್ಯಾನಗರ ವಾಸಿ,
(ನಾಗರಸಹಳ್ಳಿ)
ದಾವಣಗೆರೆ ಜಿಲ್ಲೆಯಲ್ಲಿ
ಮೊದಲ ಕೋಳಿ ಫಾರಂ
ಸ್ಥಾಪಕರೂ, ಕೃಷಿಕರೂ,
ಸ್ನೇಹಜೀವಿಗಳೂ ಆಗಿದ್ದ

**ಶ್ರೀ ಮುರಳಿಕೃಷ್ಣ ಚಲಸಾನಿ**

ಅವರು ದೈವಾಧೀನರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
'ವೈಕುಂಠ ಸಮಾರಾಧನೆ'ಯನ್ನು
ದಿನಾಂಕ 08-07-2021ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ದೊಡ್ಡಬಳ್ಳಾಪುರ ರಸ್ತೆಯಲ್ಲಿರುವ ಲೆಗಸಿ ಎಸ್ಟಿಲೊ (Legacy Estillo) ನಲ್ಲಿ ಏರ್ಪಡಿಸಲಾಗಿದೆ. ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಈ ಪ್ರಯುಕ್ತ
ವಿಕಾಸ ತರಂಗಿಣಿ ಮತ್ತು
ಸ್ಫೂರ್ತಿ ಸೇವಾ ಟ್ರಸ್ಟ್‌ನಿಂದ
ದಾವಣಗೆರೆಯಲ್ಲಿ ಇಂದು
ಪ್ರಸಾದ ವಿತರಣೆ.

ಇಂತಿ ದುಃಖತಪ್ತರು :
ಪತ್ನಿ : ಶ್ರೀಮತಿ ಜಾನ್ಸಿರಾಣಿ ಮುರಳಿಕೃಷ್ಣ
ಮಕ್ಕಳಾದ :
ಡಾ|| ಅನುಪಮ, ಅಮೆರಿಕಾ,
ಡಾ|| ನಿರುಪಮಾ, ಅಮೆರಿಕಾ.


MAHA TVS


## REQUIRED

CC EXECUTIVE
SALES EXECUTIVE
SERVICE ADVISOR
RTO WORKER
BACK OFFICE EXECUTIVE



ಮಹಾ ಟಿ.ವಿ.ಎಸ್., ನಂ. 596, ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, ಹದಡಿ ರಸ್ತೆ, ವಾಣಿ ರೈಸ್ ಮಿಲ್ ಎದುರುಗಡೆ, ದಾವಣಗೆರೆ.
95387 86047, 99864 80403


## ದ್ವಿತೀಯ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಸಿ.ಕೇಶವಮೂರ್ತಿಯವರು

ದಾವಣಗೆರೆ ನಗರಸಭೆ ಹಾಗು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು, ರೋಟರಿ ಮಾಜಿ ಗೌರ್ನರ್‌ರು, ದಾವಣಗೆರೆ ನಗರವಾಣಿ ದಿನಪತ್ರಿಕೆಯ ಸಂಸ್ಥಾಪಕರು, ರೆಡ್‌ಕ್ರಾಸ್ ಸಂಸ್ಥೆಯ ಮಾಜಿ ಉಪಾಧ್ಯಕ್ಷರು, ದಾವಣಗೆರೆ ಕ್ಲಬ್‌ನ ಮಾಜಿ ಅಧ್ಯಕ್ಷರು, ಹೋಟೆಲ್ ಶಾಂತಿಪಾರ್ಕ್ ಹಾಗು ಶಾಂತಿ ರಾಯಲ್‌ಗಳ ನಿರ್ಮಾತೃಗಳು, ಕಿವುಡ-ಮೂಕರ ವಾಕ್ ಶ್ರವಣ ಕೇಂದ್ರ, ರೋಟರಿ ಸಭಾಂಗಣ, ಶಾಸ್ತ್ರಿಹಳ್ಳಿ ವೃದ್ಧಾಶ್ರಮ ಸೇರಿದಂತೆ ಹತ್ತಾರು ಸಮಾಜಮುಖಿ ಸೇವಾ ಕಾರ್ಯಗಳಿಗೆ ನೆರವು ನೀಡಿದ ದಾನಿಗಳೂ ಆದ

**ಶ್ರೀ ಸಿ.ಕೇಶವಮೂರ್ತಿಯವರು**

ನಮ್ಮನ್ನೆಲ್ಲ ಅಗಲಿ ಇಂದಿಗೆ ಎರಡು ವರ್ಷಗಳಾದವು. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತ, ಸದಾ ಅವರನ್ನು ಸ್ಮರಿಸಿಕೊಳ್ಳುವ

**ಕುಟುಂಬ ವರ್ಗ, ಸಂಘ-ಸಂಸ್ಥೆಗಳು,
ಸ್ನೇಹಿತರು ಹಾಗು ಬಂಧು-ಮಿತ್ರರು**





## ಹುಟ್ಟುಹಬ್ಬದ ಶುಭಾಶಯಗಳು

ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕದ ಗೌರವಾಧ್ಯಕ್ಷರೂ,
ಯುವ ಮುಖಂಡರೂ, ನಮ್ಮ ಆತ್ಮೀಯರೂ ಆದ

**ಶ್ರೀ ಹೆಚ್.ವಿ. ಪ್ರಶಾಂತ್ (ಪಚ್ಚಿ)**

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.
ಶ್ರೀಯುತರಿಗೆ ಭಗವಂತನು ಆಯುರಾರೋಗ್ಯ ಭಾಗ್ಯ
ಕರುಣಿಸಲೆಂದು ಪ್ರಾರ್ಥಿಸುತ್ತೇವೆ.





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte